ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಡಿ

# ಸೌಹಾರ್ದ ಸಹಕಾರಿ ಏಕೆ? ಹೇಗೆ?

ಪ್ರಕಾಶಕರು : **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಂ 132, ಮೊದಲನೇ ಮಹಡಿ, ಕೆ.ಎಚ್.ರಸ್ತೆ,
ಬೆಂಗಳೂರು 560027.
ದೂರವಾಣಿ: 080 22127003/04
ಇ–ಮೇಲ್: souharda@souharda.coop
ವೆಬ್‌ಸೈಟ್: www.souharda.coop

# ಮುನ್ನುಡಿ.....

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಇದು ಕರ್ನಾಟಕ ರಾಜ್ಯದ ಸಹಕಾರಿಗಳಿಗೆ ಹೆಚ್ಚಿನ ಸ್ವಾತಂತ್ರ್ಯ ಹಾಗೂ ಜವಾಬ್ದಾರಿಗಳನ್ನು ನೀಡಿದ ಕಾಯ್ದೆ. ಈ ಕಾಯ್ದೆಯಡಿ ಹೊಸ ಸಹಕಾರಿಗಳೂ ನೋಂದಣಿಗೊಳ್ಳಬಹುದು. ಹಾಗೂ ಈಗಾಗಲೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ,1959ರಡಿ ಚಟುವಟಿಕೆ ನಡೆಸುತ್ತಿರುವ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಹೊರತು ಪಡಿಸಿ ಉಳಿದೆಲ್ಲಾ ರೀತಿಯ ಸಹಕಾರ ಸಂಘಗಳು ಈ ಕಾಯ್ದೆಗೆ ಪರಿವರ್ತನೆಗೊಳ್ಳಲು ಅವಕಾಶವಿದೆ.

ಕಳೆಗುಂದಿದ ಸಹಕಾರಿ ಕ್ಷೇತ್ರಕ್ಕೆ ಜೀವ ತುಂಬುವ ದೃಷ್ಟಿಯಿಂದ ನಡೆದ ವಿವಿಧ ರೀತಿಯ ಚಿಂತನ – ಮಂಥನದ ಆಧಾರದ ಮೇಲೆ ಕೇಂದ್ರ ಯೋಜನಾ ಆಯೋಗ ನೀಡಿದ ಮಾದರಿ ಸಹಕಾರಿ ಕಾಯ್ದೆಯ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ, 1997 ಜಾರಿಗೆ ಬಂದಿದೆ. ದೇಶದ ಎಂಟು ರಾಜ್ಯಗಳಲ್ಲಿ ಈಗಾಗಲೇ ಇದೇ ಮಾದರಿಯ ಕಾಯ್ದೆ ಜಾರಿಗೆ ಬಂದಿದೆ. ಇನ್ನೂ ಅನೇಕ ರಾಜ್ಯಗಳಲ್ಲೂ ಈ ಮಾದರಿಯ ಕಾಯ್ದೆ ಜಾರಿಯು ವಿವಿಧ ಹಂತದಲ್ಲಿದೆ. ಕೇಂದ್ರ ಸರಕಾರವೂ ಬಹು ರಾಜ್ಯಗಳ ಸಹಕಾರ ಸಂಘಗಳ ಕಾಯ್ದೆ 2002ನ್ನು ಇದೇ ಮಾದರಿಯಲ್ಲಿ ಬದಲಾಯಿಸಿದೆ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 2001ನೇ ಇಸವಿಯಿಂದ ಜಾರಿಯಲ್ಲಿದೆ. ಇಂದಿನ ದಿನಾಂಕದಂತೆ 19 ಪಟ್ಟಣ ಸಹಕಾರಿ ಬಾಂಕುಗಳೂ ಸೇರಿದಂತೆ ಒಟ್ಟು 1150 ಕ್ಕೂ ಹೆಚ್ಚು ಸಹಕಾರಿಗಳು ಈ ಕಾಯ್ದೆಯಡಿ ಚಟುವಟಿಕೆ ನಡೆಸುತ್ತಿವೆ. ದಿನೇ ದಿನೇ ಈ ಸಂಖ್ಯೆ ಏರುತ್ತಿದೆ.

ಸೌಹಾರ್ದ ಕಾಯ್ದೆಯಡಿ ಹೊಸದಾಗಿ ನೋಂದಣಿಗೊಳ್ಳುತ್ತಿರುವ ಸಹಕಾರಿಗಳಿಗೆ ಹಾಗೂ ಈ ಕಾಯ್ದೆಯಡಿ ಪರಿವರ್ತಿತಗೊಳ್ಳುವ ಸಹಕಾರ ಸಂಘಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಈ ಕೈಪಿಡಿಯನ್ನು ಹೊರತರುತ್ತಿದ್ದು ತಮಗೆ ಇದು ಉಪಯೋಗವಾಗಬಹುದೆಂದು ಭಾವಿಸುವೆವು. ಈ ಕೈಪಿಡಿಯಲ್ಲಿ ನೋಂದಣಿ ಕುರಿತಂತೆ ಮಾನ್ಯ ನಿಬಂಧಕರು ಹೊರಡಿಸಿರುವ ಸುತ್ತೋಲೆ, ಅಮಾನತ್ ಖಾತೆಯಿಂದ ಸಹಕಾರಿಯ ಖಾತೆಗೆ ಶೇರು ಹಣ ವರ್ಗಾವಣೆಯ ಬಗ್ಗೆ ಮಾನ್ಯ ನಿಬಂಧಕರ ಕಛೇರಿಯ ಸ್ಪಷ್ಟೀಕರಣಗಳನ್ನು ಸಹ ತಮ್ಮ ಅನುಕೂಲಕ್ಕಾಗಿ ನೀಡುತ್ತಿದ್ದೇವೆ. ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯ ಕಛೇರಿಯನ್ನು ಸಂಪರ್ಕಿಸಿ.

ಬೆಂಗಳೂರು ಪ್ರಕಾಶಕ
20 ಜುಲೈ 2009

# ನಿಮ್ಮೊಡನೆ



ಸಹಕಾರಿ ಕ್ಷೇತ್ರವನ್ನು ಪುನರ್ ಸಂಘಟಿಸುವುದಕ್ಕಾಗಿ, ಸಹಕಾರಿ ಕ್ಷೇತ್ರವು ಜನಸಾಮಾನ್ಯರು ಅಪೇಕ್ಷಿಸುವ ನೈಜ ಸಹಕಾರಿ ಚಳುವಳಿಯಾಗುವುದಕ್ಕಾಗಿ, ಸಹಕಾರಿ ಕ್ಷೇತ್ರದಲ್ಲಿ ಸ್ವಾಯತ್ತತೆ ಹಾಗೂ ಸ್ವಯಂ ನಿಯಂತ್ರಣಗಳ ಅಗತ್ಯದ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಜನೇವರಿ 1, 2001ರಿಂದ ಜಾರಿಗೆ ಬಂದಿರುವ ಸೌಹಾರ್ದ ಸಹಕಾರಿ ಕಾಯ್ದೆಯು ರಾಜ್ಯದ ಸಹಕಾರಿಗಳ ಹಾಗೂ ಸರಕಾರದ ಮನ್ನಣೆ ಗಳಿಸುವಲ್ಲಿ ಯಶಸ್ವಿಯಾಗಿದೆ. ರಾಜ್ಯಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಸೌಹಾರ್ದ ಸಹಕಾರಿಗಳು ನೋಂದಣಿಯಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಈ ಕಾರ್ಯದಲ್ಲಿ ಕೈಜೋಡಿಸಿದ ಎಲ್ಲ ಸಹಕಾರಿಗಳೂ ಅಭಿನಂದನೆಗಳು.

ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ. ಸಂಯುಕ್ತ ಸಹಕಾರಿ ಈ ಕಾರ್ಯದ ನೇತೃತ್ವ ವಹಿಸಿದೆ. ಅದಕ್ಕಾಗಿಯೇ ಶಿಕ್ಷಣ, ತರಬೇತಿ, ಪ್ರಚಾರ, ಪ್ರಕಾಶನ ಮುಂತಾದ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳುತ್ತಿದೆ.

ಪ್ರಸ್ತುತ ಸೌಹಾರ್ದ ಸಹಕಾರಿ ಕಾಯ್ದೆ ಕನ್ನಡ ಹಾಗೂ ಇಂಗ್ಲೀಷ ಪ್ರತಿಗಳು, ಉಪವಿಧಿಗಳು, ಸಾಲದ ನಿಯಮಗಳು, ಸೇವಾನಿಯಮಗಳು, ಸೌಹಾರ್ದ ಸಹಕಾರಿಗಳನ್ನು ಪ್ರಾರಂಭಿಸುವ ಬಗ್ಗೆ ಮಾಹಿತಿ ನೀಡುವ – ಕೈಪಿಡಿ, ಸಂಯುಕ್ತ ಸಹಕಾರಿಯ ಉಪವಿಧಿಗಳು ಇತ್ಯಾದಿ ಪ್ರಕಟಣೆಗಳನ್ನು ಸಂಯುಕ್ತ ಸಹಕಾರಿಯಲ್ಲಿ ಯಾವಾಗಲೂ ಲಭ್ಯವಾಗಬೇಕೆಂಬ ಸಹಕಾರಿಗಳ ಅಪೇಕ್ಷೆಯಂತೆ ಪ್ರಕಟಿಸಲಾಗುತ್ತಿದೆ.

ಈ ಎಲ್ಲ ಪ್ರಕಟಣೆಗಳು ಸಹಕಾರಿ ಬಂಧುಗಳಿಗೆ ಉಪಯೋಗವಾಗಲೆಂದು ಹಾಗೂ ಸೌಹಾರ್ದ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಲೆಂದು ಅಪೇಕ್ಷಿಸುತ್ತೇವೆ.

**ವಿಶ್ವನಾಥ ಚ. ಹಿರೇಮಠ**
**ಅಧ್ಯಕ್ಷರು.**

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

2000ದ ಅಧಿನಿಯಮ ಸಂಖ್ಯೆ 17.– 1997ರ ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕವು, ಇತರ ವಿಷಯಗಳೊಂದಿಗೆ ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸುತ್ತದೆ:

(1) ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದು;

(2) ನೋಂದಣಿ ಮತ್ತು ರದ್ದಿಯಾತಿಗಳನ್ನು ಬಿಟ್ಟು ಉಳಿದಂತೆ ಸಹಕಾರಿಗಳ ಮುಕ್ತ ಕಾರ್ಯಾಚರಣೆಗೆ ತಡೆಯೊಡ್ಡುವ ಸರ್ಕಾರದ ಎಲ್ಲ ರೀತಿಯ ನಿರ್ಬಂಧಗಳು ಮತ್ತ ನಿಯಂತ್ರಣಗಳು ಮತ್ತು ಹಸ್ತಕ್ಷೇಪವನ್ನು ನಿವಾರಿಸುವುದು;

(3) ಪೂರಕ ಸಂಸ್ಥೆಗಳಿಗೆ, ಸಹಕಾರಿಗಳ ನಡುವೆ ಪಾಲುದಾರಿಕೆಗೆ ಮತ್ತು ಸಹಕಾರಿಗಳು ಹಾಗೂ ಇತರ ಸಂಸ್ಥೆಗಳ ನಡುವೆ ಸಹೋದ್ಯಮಕ್ಕೆ ಉತ್ತೇಜನ ನೀಡುವುದು;

(4) ಮೇಲೆ ಹೇಳಿದ ಉದ್ದೇಶಗಳ ಮುಂದುವರಿಕೆಯಲ್ಲಿ ಸಹಕಾರಿಗಳು, ಒಕ್ಕೂಟ ಸಹಕಾರಿಗಳು ಮತ್ತು ಸಂಯುಕ್ತ ಸಹಕಾರಿಯನ್ನು ನೋಂದಣಿ ಮಾಡುವುದು.

(5) 1959ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲಾದ ಸಹಕಾರ ಸಂಘಗಳನ್ನು ಪ್ರಸ್ತಾವಿತ ಶಾಸನದ ಅಡಿ ಸಹಕಾರಿಯಾಗಿ ಪರಿವರ್ತಿಸುವುದು.

ಆದ್ದರಿಂದ ವಿಧೇಯಕ.

# ಸೌಹಾರ್ದ ಕಾಯ್ದೆ ಏಕೆ? ಹೇಗೆ?

ಭಾರತದಲ್ಲಿ ಸಹಕಾರಿ ಕಾಯ್ದೆ ಜಾರಿಗೆ ಬಂದು ನೂರು ವರ್ಷಗಳು ಸಂದಿವೆ. 1904 ಮಾರ್ಚ 25 ರಿಂದ ಜಾರಿಗೆ ಬಂದ *The Cooperative Credit Societies Act, 1904* ನಮ್ಮ ದೇಶದ ಮೊದಲ ಸಹಕಾರಿ ಕಾಯ್ದೆ. ಧಾರವಾಡ ಜಿಲ್ಲೆಯ (ಈಗಿನ ಗದಗ) ಕಣಗಿನಹಾಳ ಗ್ರಾಮದಲ್ಲಿ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರು 8 ಜುಲೈ 1905 ರಂದು 12 ಜನ ಸದಸ್ಯರೊಂದಿಗೆ 2 ಸಾವಿರ ರೂಪಾಯಿ ಶೇರು ಬಂಡವಾಳದೊಂದಿಗೆ ಆರಂಭಿಸಿದ ಕೃಷಿ ಪತ್ತಿನ ಸಹಕಾರ ಸಂಘವು ದೇಶದ ಮೊದಲ ಸಹಕಾರ ಕಾಯ್ದೆಯಡಿ ಮೊದಲ ಸಹಕಾರ ಸಂಘ ಎಂಬುದು ಕರ್ನಾಟಕ ರಾಜ್ಯದ ಹೆಗ್ಗಳಿಕೆ. 1904 ರಲ್ಲಿ ಜಾರಿಗೆ ಬಂದ ಕಾಯ್ದೆಯು ಕೇವಲ ಪತ್ತಿನ ಸಹಕಾರ ಸಂಘಗಳಿಗಾಗಿತ್ತು. ನಂತರ 1912 ರಲ್ಲಿ ಬೇರೆ ಬೇರೆ ಚಟುವಟಿಕೆಗಳನ್ನು ನಡೆಸಲು ಅನುವು ಮಾಡಿಕೊಡುವ *The Cooperative Societies Act, 1912* ಜಾರಿಗೆ ಬಂದಿತು. 1919 ರ ಭಾರತ ಸರಕಾರದ ಕಾಯ್ದೆಯಂತೆ ಸಹಕಾರ ವಿಷಯವು ಪ್ರಾಂತೀಯ ಸರಕಾರಗಳ ವಿಷಯ ಪಟ್ಟಿಯಲ್ಲಿ ಬಂದಾಗ ಪ್ರಾಂತೀಯ ಸರಕಾರಗಳು ತಮ್ಮದೇ ಸಹಕಾರ ಕಾಯ್ದೆಗಳನ್ನು ಕಾಲಾನುಕ್ರಮದಲ್ಲಿ ರೂಪಿಸಿಕೊಂಡವು. ಈ ಸಂದರ್ಭದಲ್ಲಿ 1912ರ ಕಾಯ್ದೆಯು ಅವುಗಳಿಗೆ ಮಾದರಿ ಆಗಿತ್ತು. ಸ್ವಾತಂತ್ರ್ಯಾನಂತರ ವಿವಿಧ ರಾಜ್ಯ ಸರಕಾರಗಳು ತಮ್ಮದೇ ಆದ ಸಹಕಾರಿ ಕಾಯ್ದೆಯನ್ನು ಮತ್ತು ಕೇಂದ್ರ ಸರಕಾರವು ಒಂದು ರಾಜ್ಯಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಚಟುವಟಿಕೆ ನಡೆಸುವ ಸಹಕಾರಿ ಸಂಸ್ಥೆಗಳಿಗೆ ಬಹುರಾಜ್ಯಗಳ ಸಹಕಾರಿ ಕಾಯ್ದೆಯನ್ನು ಜಾರಿಗೆ ತಂದವು. ಈ ಕಾಯ್ದೆಗಳಿಗೂ 1912 ರ ಕಾಯ್ದೆಯೇ ಮಾದರಿಯಾಗಿತ್ತು.

ದೇಶದ ಅಭಿವೃದ್ಧಿಯಲ್ಲಿ ಸಹಕಾರಿ ರಂಗವನ್ನು ತೊಡಗಿಸಲು ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಈ ಕ್ಷೇತ್ರಕ್ಕೆ ವಿವಿಧ ಯೋಜನೆಗಳ ಮೂಲಕ ಕೋಟ್ಯಂತರ ರೂಪಾಯಿ ಹಣವನ್ನು ಶೇರು ಹಣ, ಸಬ್ಸಿಡಿ, ಸಹಾಯ ಧನ ಮುಂತಾದ ರೂಪದಲ್ಲಿ ನೀಡಿದವು. ಗ್ರಾಮಕ್ಕೊಂದು ಪಂಚಾಯತಿ, ಗ್ರಾಮಕ್ಕೊಂದು ಶಾಲೆ ಹಾಗೂ ಗ್ರಾಮಕ್ಕೊಂದು ಸಹಕಾರ ಸಂಘ ಇವುಗಳು ಸಮುದಾಯ ಅಭಿವೃದ್ಧಿಯ ಮೂರು ಆಧಾರ ಸ್ತಂಭಗಳು ಎಂದೇ ಕರೆಯಲ್ಪಟ್ಟವು. ಅದಕ್ಕಾಗಿಯೇ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸ್ವಾತಂತ್ರ್ಯಾನಂತರ ಕೋಟ್ಯಂತರ ರೂಪಾಯಿ ಹಣವನ್ನು ಸಹಕಾರಿ ಕ್ಷೇತ್ರಕ್ಕೆ ಸುರಿದವು. ಆದರೂ ಸಹಕಾರಿ ಕ್ಷೇತ್ರ ನಿರೀಕ್ಷಿತ ಯಶಸ್ಸು ಸಾಧಿಸಲಿಲ್ಲ. ಈ ಕುರಿತು ಅನೇಕ ವೇದಿಕೆಗಳ ಮೂಲಕ ಚರ್ಚೆ ಆರಂಭವಾಯಿತು. ಸಹಕಾರಿ ಕ್ಷೇತ್ರ ನಿರೀಕ್ಷಿತ ಯಶಸ್ಸು ಸಾಧಿಸಿಲ್ಲ ಹಾಗೂ ಸಹಕಾರಿ ರಂಗ ದಾರಿ ತಪ್ಪಿದೆ ಎಂಬ ಸಹಕಾರಿಗಳ ಕೂಗು ದಿನೇ ದಿನೇ ಹೆಚ್ಚುತ್ತಾ ಹೋಯಿತು. ಇದನ್ನು ಗಮನಿಸಿದ ಕೇಂದ್ರ ಸರ್ಕಾರ ಶ್ರೀ ಅರ್ಧನಾರೀಶ್ವರನ್ ಇವರ ಅಧ್ಯಕ್ಷತೆಯಲ್ಲಿ ಈ ಕುರಿತು ಅಧ್ಯಯನ ನಡೆಸಲು ಅಧ್ಯಯನ ಸಮಿತಿಯೊಂದನ್ನು

ರಚಿಸಿತು. ಈ ಸಮಿತಿಯು 1987ರಲ್ಲಿ ವರದಿ ನೀಡಿ ಸರಕಾರದ ಅತಿಯಾದ ಹಸ್ತಕ್ಷೇಪದಿಂದಾಗಿ ದೇಶದಲ್ಲಿ ಸಹಕಾರಿ ಚಳುವಳಿ ವಿಫಲವಾಗಿದೆಯೆಂದು ಹೇಳಿತು. ಸಹಕಾರಿ ಚಳುವಳಿ ವಿಫಲವಾದರೂ ಜನಸಾಮಾನ್ಯರು ತಮ್ಮ ಆರ್ಥಿಕ ಏಳ್ಗೆಗಾಗಿ ತಾವೇ ಸ್ವಯಂಸ್ಫೂರ್ತಿಯಿಂದ ಭಾಗವಹಿಸುವ ಈ ಆಂದೋಲನ ಯಶಸ್ವಿಯಾಗುವ ಅಗತ್ಯವಿರುವುದನ್ನು ಗುರುತಿಸಿದ ಕೇಂದ್ರ ಯೋಜನಾ ಆಯೋಗ ಸರಕಾರದ ಹಸ್ತಕ್ಷೇಪ ತಡೆಯಬಲ್ಲ, ಸದಸ್ಯರಿಗೆ ಹೆಚ್ಚು ಅಧಿಕಾರ ನೀಡುವ ಹಾಗೂ ಅವರ ಸಹಭಾಗಿತ್ವ ಹೆಚ್ಚಿಸುವ, ಸಹಕಾರಿ ಸಂಘಗಳಿಗೆ ಚಟುವಟಿಕೆ ನಡೆಸಲು ಮುಕ್ತ ವಾತಾವರಣ ನಿರ್ಮಿಸುವಂತಹ ಮಾದರಿ ಸಹಕಾರಿ ಕಾಯ್ದೆಯನ್ನು ರೂಪಿಸಲು ಚೌಧರಿ ಬ್ರಹ್ಮಪ್ರಕಾಶರ ನೇತೃತ್ವದಲ್ಲಿ ಇನ್ನೊಂದು ಸಮಿತಿಯನ್ನು ನೇಮಿಸಿತು. ಈ ಸಮಿತಿ 1991 ರಲ್ಲಿ ವಿವಿಧ ರಾಜ್ಯಗಳ ಪ್ರಸ್ತುತ ಜಾರಿಯಲ್ಲಿರುವ ಸಹಕಾರಿ ಕಾಯ್ದೆಗಳ ಬಗ್ಗೆ ವಿವರವಾದ ಅಧ್ಯಯನ ನಡೆಸಿ ಒಂದು ಮಾದರಿ ಕಾಯ್ದೆ ರೂಪಿಸಿತು. ಈ ಮಾದರಿ ಸಹಕಾರಿ ಕಾಯ್ದೆಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿ ಕೇಂದ್ರ ಸರಕಾರವು ಎಲ್ಲ ರಾಜ್ಯ ಸರಕಾರಗಳಿಗೆ ಕಳುಹಿಸಿತು. ಈ ರೀತಿ ವಿವರವಾದ ಅಧ್ಯಯನದ ಫಲವಾಗಿ ಯೋಜನಾ ಆಯೋಗ ರೂಪಿಸಿದ ಮಾದರಿ ಸಹಕಾರಿ ಕಾಯ್ದೆಗನುಗುಣವಾಗಿ ನಮ್ಮ ರಾಜ್ಯದಲ್ಲಿ ಜಾರಿಗೆ ಬಂದ ಕಾಯ್ದೆಯೇ "ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997"

**ಕರ್ನಾಟಕ ಸೌಹಾರ್ದ ಸಹಕಾರ ಅಧಿನಿಯಮ, 1997ರ ಮುಖ್ಯಾಂಶಗಳು:**

- ಸಹಕಾರಿಯ ಸಂಪೂರ್ಣ ಒಡೆತನ, ನಿರ್ವಹಣೆ, ನಿಯಂತ್ರಣ ಸದಸ್ಯರದ್ದೇ.
- ಸ್ವಸಹಾಯ ಮತ್ತು ಪರಸ್ಪರ ಆಧಾರದ ಮೇಲೆ ಸಹಕಾರಿ ಸಂಸ್ಥೆಗಳ ರಚನೆ.
- ಸಹಕಾರಿ ತತ್ವಗಳಿಂದ ಮಾರ್ಗದರ್ಶನ. ಸಹಕಾರಿ ತತ್ವಗಳನ್ನು ಕಾನೂನಿನಲ್ಲಿ ಅಳವಡಿಕೆ.
- ಸಹಕಾರಿಗಳಿಗೆ ಹೆಚ್ಚು ಜವಾಬ್ದಾರಿ, ಹೆಚ್ಚು ವ್ಯಾವಹಾರಿಕ ಸ್ವಾತಂತ್ರ್ಯ.
- ಸಹಕಾರಿಗಳು ಹೆಚ್ಚು ಸ್ಪರ್ಧಾತ್ಮಕ ಹಾಗೂ ಸ್ವಾವಲಂಬಿಯಾಗಲು ಪ್ರೋತ್ಸಾಹ.
- ಸಹಕಾರಿಗಳಿಗೆ ಆರ್ಥಿಕ ಉದ್ದಿಮೆಯ ಸ್ಥಾನ.
- ನೋಂದಣಿ ಮತ್ತು ಸಮಾಪನೆ ಹೊರತು ಸಹಕಾರಿಗಳ ಮುಕ್ತ ಕಾರ್ಯಾಚರಣೆಗೆ ಅಡ್ಡಿಯಾಗುತ್ತಿದ್ದ ಸರಕಾರದ ಎಲ್ಲಾ ನಿಯಂತ್ರಣ ಮತ್ತು ಹಸ್ತಕ್ಷೇಪಗಳ ನಿವಾರಣೆ.
- ಪೂರಕ ಸಂಸ್ಥೆ ಪ್ರಾರಂಭಿಸಲು ಹಾಗೂ ಇತರೆ ಸಂಸ್ಥೆಗಳ ನಡುವೆ ಸಹೋದ್ಯಮ ಹಾಗೂ ಪಾಲುದಾರಿಕೆ ಆರಂಭಿಸಲು ಪ್ರೋತ್ಸಾಹ.
- ಯಾವುದೇ ಐದು ಅಥವಾ ಹೆಚ್ಚು ಸೌಹಾರ್ದ ಸಹಕಾರಿಗಳು ಸೇರಿ ಒಕ್ಕೂಟ ಸಹಕಾರಿಯಾಗಿ ಚಟುವಟಿಕೆ ನಡೆಸಲು ಅವಕಾಶ.





- ಸಹಕಾರಿಗಳ ಮೇಲ್ವಿಚಾರಣೆ, ಉಸ್ತುವಾರಿ, ನಿಯಂತ್ರಣ ಇತ್ಯಾದಿಗಳ ಜವಾಬ್ದಾರಿ ಸಹಕಾರಿಗಳಿಂದಲೇ ರಚಿತವಾದ ಸಂಯುಕ್ತ ಸಹಕಾರಿಗೆ.
- ಲೆಕ್ಕಪರಿಶೋಧನೆ ಸಂಯುಕ್ತ ಸಹಕಾರಿ ಪಟ್ಟಿ ಮಾಡಿದ ಲೆಕ್ಕ ಪರಿಶೋಧಕರಿಂದ. ಲೆಕ್ಕ ಪರಿಶೋಧಕರು ಸಹಕಾರಿಗಳ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲೇ ಬೇಕು. ಲೆಕ್ಕ ಪರಿಶೋಧಕರಿಗೂ ಜವಾಬ್ದಾರಿ.
- ಸಹಕಾರಿಗಳು ಡಿ.ಸಿ.ಸಿ ಬ್ಯಾಂಕುಗಳಷ್ಟೇ ಅಲ್ಲದೇ ಯಾವುದೇ ಅನುಸೂಚಿತ ಬ್ಯಾಂಕಿನ ಜೊತೆಗೆ ವ್ಯವಹಾರ ಮಾಡಲು ಮುಕ್ತ ಅವಕಾಶ.
- ಸದಸ್ಯರಿಗೆ ಸಹಕಾರಿಯೊಂದಿಗೆ ಕನಿಷ್ಠ ವ್ಯವಹಾರ ಮಾಡುವ ಹಾಗೂ ಸಾಮಾನ್ಯ ಸಭೆಗಳಲ್ಲಿ ಭಾಗವಹಿಸುವ ಜವಾಬ್ದಾರಿ.
- ಸಹಕಾರಿಯ ಸಿಬ್ಬಂದಿ ನೇಮಕಾತಿ, ವೇತನಶ್ರೇಣಿ ನಿರ್ಧಾರ, ಭಡ್ತಿ, ಇತ್ಯಾದಿಗಳಿಗೆ ಸಾಮಾನ್ಯ ಸಭೆಯ ನಿರ್ಣಯವೇ ಅಂತಿಮ.
- ಯಾವುದೇ ವ್ಯಕ್ತಿಯ ಸದಸ್ಯತ್ವವನ್ನು ಆಡಳಿತ ಮಂಡಳಿ ನಿರಾಕರಿಸಿದರೆ ಅಥವಾ ತೆಗೆದು ಹಾಕಿದರೆ ಮೇಲ್ಮನವಿ ಆಯಾ ಸಹಕಾರಿಯ ಸಾಮಾನ್ಯ ಸಭೆಗೆ. ಈ ವಿಷಯದಲ್ಲಿ ಸಾಮಾನ್ಯ ಸಭೆಯ ನಿರ್ಣಯವೇ ಅಂತಿಮ.
- ಯಾವುದೇ ಸಹಕಾರಿಯ ಆಡಳಿತ ಮಂಡಳಿಯ 1/3ರಷ್ಟು ಸದಸ್ಯರು ಅಥವಾ ಒಟ್ಟು ಸದಸ್ಯರ 1/10 ಜನ ಅಥವಾ ಸಂಯುಕ್ತ ಸಹಕಾರಿ ಕೋರಿದಲ್ಲಿ ನಿಬಂಧಕರಿಂದ ವಿಚಾರಣೆ.
- ಸದಸ್ಯರೊಂದಿಗೆ ಉಂಟಾದ ವಿವಾದಗಳ ಪರಿಹಾರಕ್ಕೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಲ್ಲಿ ಇರುವಂತೆ ಇಲಾಖೆಯ ಪಂಚಾಯಿತಿ ವ್ಯವಸ್ಥೆಯ ಯಥಾವತ್ ಮುಂದುವರಿಕೆ.
- ಸಮಾಪನೆಗೆ ಒಪ್ಪಿಗೆ ಸಾಮಾನ್ಯ ಸಭೆಯಿಂದಲೇ.

## ಸ್ವಯಂ ನಿಯಂತ್ರಣಾ ಸಂಸ್ಥೆಯಾಗಿ ಸಂಯುಕ್ತ ಸಹಕಾರಿ

ಸೌಹಾರ್ದ ಕಾಯ್ದೆಯ ಜಾರಿಯ ಉದ್ದೇಶ ಸಹಕಾರಿಗಳಿಗೆ ಹೆಚ್ಚು ವ್ಯಾವಹಾರಿಕ ಸ್ವಾತಂತ್ರ್ಯ ನೀಡುವುದು ಹಾಗೂ ಅವುಗಳನ್ನು ಸ್ವಯಂ ಆಡಳಿತದ ಶಿಸ್ತಿಗೆ ಒಳಪಡಿಸುವುದು. ಸ್ವಯಮಾಡಳಿತದ ಮೊದಲ ಹಂತವಾಗಿ ಸಹಕಾರಿಯ ಆಡಳಿತ ಮಂಡಳಿಗೆ ಕೆಲವು ನಿರ್ದಿಷ್ಟ ಪಡಿಸಿದ ಅಧಿಕಾರಗಳನ್ನು ನೀಡಲಾಗಿದೆ. ಸ್ವಯಂ ಆಡಳಿತದ ಎರಡನೆಯ ಹಂತ, ಸಹಕಾರಿಯ ಸಾಮಾನ್ಯ ಸಭೆ. ಸಹಕಾರಿಯ ನಿಯಂತ್ರಣದ, ಉಸ್ತುವಾರಿಯ ಕೆಲವು ಅಧಿಕಾರಗಳನ್ನು ಸಾಮಾನ್ಯ ಸಭೆಗೆ ನೀಡಲಾಗಿದೆ. ಸ್ವಯಮಾಡಳಿತದ ಮೂರನೆಯ ಹಂತ ಕಾಯ್ದೆಯಡಿ ರಚಿಸಲ್ಪಟ್ಟ ಸಂಯುಕ್ತ ಸಹಕಾರಿ. ಸಹಕಾರಿಗಳ

ಕೆಲವು ಆಡಳಿತಾತ್ಮಕ ಉಸ್ತುವಾರಿಗಳ ನಿರ್ವಹಣೆಯ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿಗೆ ನೀಡಲಾಗಿದೆ.

**ಸಂಯುಕ್ತ ಸಹಕಾರಿಯ ರಚನೆ:**

ಸೌಹಾರ್ದ ಕಾಯ್ದೆಯಡಿ ನೋಂದಣಿಗೊಂಡ ಎಲ್ಲಾ ಸಹಕಾರಿಗಳೂ ಸಂಯುಕ್ತ ಸಹಕಾರಿಯ ಸದಸ್ಯರಾಗುತ್ತಾರೆ. ಸಂಯುಕ್ತ ಸಹಕಾರಿಯ ಮಂಡಳಿಯ ಚುನಾವಣೆ ಐದು ವರ್ಷಗಳಿಗೊಮ್ಮೆ ನಡೆಯುತ್ತದೆ. ಮಂಡಳಿಯಲ್ಲಿ ಪ್ರತಿ ಜಿಲ್ಲೆಯನ್ನು ಒಬ್ಬ ನಿರ್ದೇಶಕರು ಪ್ರತಿನಿಧಿಸುತ್ತಾರೆ. ಮಂಡಳಿಯ ಸಭೆ ವರ್ಷಕ್ಕೆ ಕನಿಷ್ಠ ಆರು ಬಾರಿ ಹಾಗೂ ಸಾಮಾನ್ಯ ಸಭೆ ವರ್ಷಕ್ಕೆ ಒಮ್ಮೆ ನಡೆಯುತ್ತದೆ.

**ಸಂಯುಕ್ತ ಸಹಕಾರಿಯ ಜವಾಬ್ದಾರಿಗಳು ಹಾಗೂ ಅಧಿಕಾರಗಳು:**

- ಸಹಕಾರಿಗಳ ಚುನಾವಣೆಗಳು ನಡೆದಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಸಹಕಾರಿಗಳು ನಿಗದಿತ ಸಮಯದಲ್ಲಿ ಸಾಮಾನ್ಯ ಸಭೆ ಹಾಗೂ ಲೆಕ್ಕ ಪರಿಶೋಧನೆ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಸಹಕಾರಿಗಳು ಸಾಮಾನ್ಯ ಸಭೆ ನಡೆಸದಿದ್ದಲ್ಲಿ, ಲೆಕ್ಕ ಪರಿಶೋಧನೆ ಮಾಡಿಸದಿದ್ದಲ್ಲಿ, ಕಾಯ್ದೆ ಹಾಗೂ ಉಪವಿಧಿಗಳನ್ನು ಉಲ್ಲಂಘಿಸಿದಲ್ಲಿ ಮಂಡಳಿಯ ರದ್ದಿಯಾತಿಯೂ ಸೇರಿದಂತೆ ಕ್ರಮ ಜರುಗಿಸುವುದು.
- ಸಹಕಾರಿಗಳಿಗಾಗಿ ವಿವಿಧ ಕಾರ್ಯನೀತಿ ರೂಪಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು.
- ಮಾದರಿ ಉಪವಿಧಿ ರಚಿಸುವುದು.
- ಸಹಕಾರಿಗಳಿಗೆ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು.
- ಸಹಕಾರಿಗಳ ಪರಿವೀಕ್ಷಣೆ.
- ಸಹಕಾರಿಗಳಿಗೆ ಶಿಕ್ಷಣ, ತರಬೇತಿ ಹಾಗೂ ಮಾರ್ಗದರ್ಶನ.

ಸಂಯುಕ್ತ ಸಹಕಾರಿಯು ಶಾಸನಬದ್ಧ ಸ್ವಯಂ ಆಡಳಿತ ನಿರ್ವಹಣೆಯ ಅಧಿಕಾರವನ್ನು ಹೊಂದಿದೆ. ಮತ್ತು ತನ್ನ ಸದಸ್ಯ ಸಹಕಾರಿಗಳ ಹಿತಾಸಕ್ತಿ ಕಾಪಾಡುವ, ಅವುಗಳ ಪರವಾಗಿ ವ್ಯವಹಾರ ಹಾಗೂ ಸೇವೆ ಕೈಗೊಳ್ಳುವ, ಸದಸ್ಯ ಸಹಕಾರಿಗಳಿಗೆ ಶಿಕ್ಷಣ ನೀಡುವ ಜವಾಬ್ದಾರಿಗಳನ್ನು ನಿರ್ವಹಿಸುತ್ತದೆ. ಒಂದು ಕಡೆ ಸ್ವಯಂ ಶಿಸ್ತನ್ನು ಕಾಪಾಡಲು ಕೆಲವು ನಿಯಂತ್ರಣಾಧಿಕಾರ ಮತ್ತು ಇನ್ನೊಂದೆಡೆ ಸಹಕಾರಿಗಳ ಹಿತಾಸಕ್ತಿ ಕಾಪಾಡುವ ಜವಾಬ್ದಾರಿ ಈ ಎರಡೂ ಪಾತ್ರಗಳನ್ನು ನಿರ್ವಹಿಸುವ ಸಂಸ್ಥೆಯಾಗಿದೆ.





## ಕಾಯ್ದೆಯಡಿ ನಿಬಂಧಕರ ಅಧಿಕಾರ

- ಸಹಕಾರಿಗಳ ನೋಂದಣಿ
- ಸಹಕಾರಿಗಳ ಉಪವಿಧಿ ತಿದ್ದುಪಡಿ
- ಸಹಕಾರಿಗಳಿಗೆ ಚುನಾವಣಾಧಿಕಾರಿ ನೇಮಕ
- ವಿವಾದಗಳ ಇತ್ಯರ್ಥ
- ಸಹಕಾರಿಯ ನಿಗದಿತ ಸದಸ್ಯರ ಕೋರಿಕೆಯ ಮೇರೆಗೆ ವಿಚಾರಣೆ
- ಸಹಕಾರಿಯ ಸಮಾಪನೆ

## ಜನಪ್ರಿಯಗೊಳ್ಳುತ್ತಿರುವ ಸೌಹಾರ್ದ ಕಾಯ್ದೆ

ಸೌಹಾರ್ದ ಕಾಯ್ದೆ ಜಾರಿಗೆ ಬಂದಿದ್ದು 2001 ಜನೇವರಿ 1 ರಂದು. ಸಂಯುಕ್ತ ಸಹಕಾರಿ ನೋಂದಣಿಗೊಂಡು ಕೆಲಸ ಆರಂಭಿಸಿದ್ದು 2002 ಮೇ ತಿಂಗಳಿನಲ್ಲಿ. 7 ವರ್ಷಗಳ ಈ ಕಡಿಮೆ ಅವಧಿಯಲ್ಲಿಯೇ ಅನೇಕ ಅಡೆ–ತಡೆಗಳು, ತಪ್ಪು ಕಲ್ಪನೆಗಳು, ಗೊಂದಲಗಳ ನಡುವೆಯೂ ಸೌಹಾರ್ದ ಸಹಕಾರಿಗಳ ಸಂಖ್ಯೆ 1150 ರ ಗಡಿ ದಾಟಿ ಮುನ್ನಡೆದಿದೆ. ಬ್ಯಾಂಕುಗಳು, ಪತ್ತಿನ ಸಹಕಾರಿಗಳು, ವಿವಿಧೋದ್ದೇಶ ಸಹಕಾರಿಗಳು, ಗೃಹ ನಿರ್ಮಾಣ ಸಹಕಾರಿಗಳು, ಶಿಕ್ಷಣ ಸಹಕಾರಿಗಳು, ಮಹಿಳಾ ಸ್ವಸಹಾಯ ಸಹಕಾರಿಗಳು, ಕುಶಲ ಕಲೆಗಳ ಸಹಕಾರಿಗಳು ಹೀಗೆ ಹತ್ತು ಹಲವು ವಿಧದ ಸಹಕಾರಿಗಳು ಸೌಹಾರ್ದ ಕಾಯ್ದೆಯಡಿ ಚಟುವಟಿಕೆ ನಡೆಸುತ್ತಿವೆ.

ಸಂಯುಕ್ತ ಸಹಕಾರಿಯೂ ಕಾಯ್ದೆಯಡಿ ತನಗೆ ವಹಿಸಲಾದ ಎಲ್ಲಾ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಿದೆ. ಸದಸ್ಯ ಸಹಕಾರಿಗಳಿಗೆ ವಿವಿಧ ರೀತಿಯ ತರಬೇತಿ ನೀಡುವುದು, ವಿವಿಧ ಮಾರ್ಗಸೂಚಿ ಹೊರಡಿಸುವುದು ಹಾಗೂ ಅವುಗಳನ್ನು ಸ್ವಯಂ ಶಿಸ್ತಿನ ಚೌಕಟ್ಟಿನಲ್ಲಿ ತರುವುದು ಈ ಎಲ್ಲಾ ಕೆಲಸಗಳನ್ನು ಸರಿಯಾಗಿ ನಿಭಾಯಿಸಿದೆ.

ಹೆಚ್ಚು ಹೆಚ್ಚು ಸಹಕಾರಿಗಳನ್ನು ಸೌಹಾರ್ದ ಕಾಯ್ದೆಯಡಿ ತರಲು ವಿಶೇಷ ಚಟುವಟಿಕೆಗಳನ್ನೂ ಕೈಗೆತ್ತಿಕೊಂಡಿದೆ. ತನ್ನದೇ ಆದ ವೆಬ್ ಸೈಟ್ ಹೊಂದಿ ಎಲ್ಲಾ ವಿವರಗಳನ್ನು ಸದಾಕಾಲ ಸದಸ್ಯ ಸಹಕಾರಿಗಳಿಗೆ ಹಾಗೂ ಇತರ ಎಲ್ಲಾ ಸಹಕಾರಿಗಳಿಗೆ ಒದಗಿಸಲು ಸನ್ನದ್ಧವಾಗಿದೆ.

# ಹೊಸ ಸೌಹಾರ್ದ ಸಹಕಾರಿಯನ್ನು ಆರಂಭಿಸುವುದು ಹೇಗೆ?

ಹೊಸ ಸಹಕಾರಿಯನ್ನು ಆರಂಭಿಸುವಾಗ ನಾಲ್ಕು ಹಂತಗಳಿವೆ. ಪ್ರಾಥಮಿಕ ಸಿದ್ಧತೆ, ಶೇರು ಸಂಗ್ರಹಣೆ, ನೋಂದಣಿ ಹಾಗೂ ಕಾರ್ಯಾರಂಭ.

**ಅ. ಪ್ರಾಥಮಿಕ ಸಿದ್ಧತೆ :**

ಬೇರೆ ಬೇರೆ ಕುಟುಂಬಕ್ಕೆ ಸೇರಿದ ಕನಿಷ್ಠ 10 ಜನರು ಒಟ್ಟಿಗೆ ಸೇರಿ, ಒಂದು ನಿರ್ದಿಷ್ಟ ಆರ್ಥಿಕ ಚಟುವಟಿಕೆಯನ್ನು ಗುರುತಿಸಿ ಪ್ರವರ್ತಕರ ಸಭೆ ಕರೆಯಬೇಕು. ಸಭೆಯ ನೋಟೀಸಿನ ಮಾದರಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. ಈ ಸಭೆಯಲ್ಲಿ ಸಹಕಾರಿಯ ಉದ್ದೇಶ, ಹೆಸರು, ಕಾರ್ಯಾಚರಣೆ ಪ್ರದೇಶ, ಅಧಿಕೃತ ಶೇರು ಬಂಡವಾಳ ಮುಂತಾದವುಗಳನ್ನು ನಿರ್ಧರಿಸಬೇಕು. ಪ್ರವರ್ತಕರ ಸಭೆಯಲ್ಲಿ ಭಾಗವಹಿಸಿದ ಜನರಲ್ಲಿ ಕನಿಷ್ಠ 10 ಜನರನ್ನು ಪ್ರವರ್ತಕರೆಂದು ಆಯ್ಕೆ ಮಾಡಬೇಕು. ಅವರಲ್ಲಿ ಒಬ್ಬರನ್ನು ಮುಖ್ಯ ಪ್ರವರ್ತಕರೆಂದು ಆಯ್ಕೆ ಮಾಡಬೇಕು. ಈ ಸಭೆಯ ನಡವಳಿಕೆಗಳನ್ನು ದಾಖಲು ಮಾಡಬೇಕು. ಪ್ರವರ್ತಕರ ಸಭೆಯ ನಡವಳಿಕೆಗಳ ಮಾದರಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

**ಆ. ಶೇರು ಸಂಗ್ರಹಣೆ :**

ಪ್ರವರ್ತಕರ ಸಭೆಯ ನಂತರ ಶೇರು ಸಂಗ್ರಹಣೆಗೆ ಮುಖ್ಯ ಪ್ರವರ್ತಕರನ್ನು ಪ್ರಾಧಿಕೃತಗೊಳಿಸಲು ನಿಮ್ಮ ಉದ್ದೇಶಿತ ಸಹಕಾರಿಯ ಕಾರ್ಯವ್ಯಾಪ್ತಿಗೆ ಸಂಬಂಧಿಸಿದ ಸಹಕಾರಿಗಳ ನಿಬಂಧಕರಿಗೆ ಈ ಕೆಳಗಿನ ದಾಖಲೆಗಳೊಂದಿಗೆ ಅನುಬಂಧ-3 ರಂತೆ ಅರ್ಜಿ ಸಲ್ಲಿಸಬೇಕು.

1. ಪ್ರವರ್ತಕರ ಸಭೆಯ ನೋಟೀಸು (ಅನುಬಂಧ-1)
2. ಪ್ರವರ್ತಕರ ಸಭೆಯ ಮತ್ತು ನಂತರ ನಡೆದ ಸಭೆಗಳ ದೃಢೀಕೃತ ನಕಲು (ಅನುಬಂಧ-2)
3. ಪ್ರವರ್ತಕರ ಸಭೆಯಲ್ಲಿ ಹಾಜರಿದ್ದ ಸದಸ್ಯರ ಪಟ್ಟಿ ಮತ್ತು ಸಹಿಯ ಯಥಾ ಪ್ರತಿ
4. ಎಲ್ಲಾ ಪ್ರವರ್ತಕರ (ಕನಿಷ್ಠ 10) ವೈಯಕ್ತಿಕ ವಿವರಗಳು. ಅವರ ಭಾವಚಿತ್ರ ಮತ್ತು ಸಹಿಯೊಂದಿಗೆ (ಮಾದರಿ ಅನುಬಂಧ-4 ರಲ್ಲಿದೆ)
5. ಪ್ರವರ್ತಕರ ಸಭೆಯಲ್ಲಿ ಅನುಮೋದನೆಗೊಂಡ ಉಪವಿಧಿ. ಉಪವಿಧಿಯ ಪ್ರತಿಯೊಂದು ಪುಟಕ್ಕೆ ಮುಖ್ಯ ಪ್ರವರ್ತಕರು ಸಹಿ ಮಾಡಬೇಕು ಹಾಗೂ ಕೊನೆಯ ಪುಟದಲ್ಲಿ ಎಲ್ಲಾ ಪ್ರವರ್ತಕರ ಸಹಿ ಇರಬೇಕು.



ಸೌಹಾರ್ದ ಸಹಕಾರಿ: ಏಕೆ? ಹೇಗೆ?

**ಅರ್ಜಿ ಸಲ್ಲಿಸಬೇಕಾದ ನಿಬಂಧಕರುಗಳು:** ನಿಮ್ಮ ಸಹಕಾರಿಯ ಕಾರ್ಯಕ್ಷೇತ್ರದ ವ್ಯಾಪ್ತಿ ತಾಲೂಕಿಗಿಂತ ಕಡಿಮೆ ಇದ್ದಲ್ಲಿ ಸಹಾಯಕ ನಿಬಂಧಕರಿಗೆ, ತಾಲೂಕಾ ಮಟ್ಟ ಹಾಗೂ ಅದಕ್ಕಿಂತ ಮೇಲ್ಪಟ್ಟು ಜಿಲ್ಲೆಗಿಂತ ಕಡಿಮೆ ಇದ್ದಲ್ಲಿ ಉಪ ನಿಬಂಧಕರಿಗೆ, ಜಿಲ್ಲಾ ಮಟ್ಟ ಹಾಗೂ ಅದಕ್ಕಿಂತ ಮೇಲ್ಪಟ್ಟು ಪ್ರಾಂತ ಮಟ್ಟಕ್ಕಿಂತ ಕಡಿಮೆ ಇದ್ದಲ್ಲಿ ಸಂಯುಕ್ತ ನಿಬಂಧಕರಿಗೆ, ಪ್ರಾಂತ ಮಟ್ಟ ಹಾಗೂ ಮೇಲ್ಪಟ್ಟ ಸಹಕಾರಿ ಇದ್ದಲ್ಲಿ ಬೆಂಗಳೂರಿನಲ್ಲಿ ಸಹಕಾರಿಗಳ ನಿಬಂಧಕರಿಗೆ.

ನಿಬಂಧಕರು ನಿಮ್ಮ ಅರ್ಜಿಯನ್ನು ಪರಿಶೀಲಿಸಿದ ನಂತರ ಶೇರು ಹಣ ಸಂಗ್ರಹಣೆಗೆ ಮುಖ್ಯ ಪ್ರವರ್ತಕರನ್ನು ಪ್ರಾಧಿಕೃತಗೊಳಿಸುತ್ತಾರೆ. ನಿಗದಿತ ದಿನದೊಳಗೆ ಶೇರು ಹಣ ಸಂಗ್ರಹಿಸಿ ನಿಬಂಧಕರು ಸೂಚಿಸಿದ ಬ್ಯಾಂಕಿನಲ್ಲಿ ಜಮಾ ಮಾಡಬೇಕು. ಆ ಬ್ಯಾಂಕು ನಿಬಂಧಕರ ನಿರ್ದೇಶನದ ಮೇರೆಗೆ ನಿಮ್ಮ ಹಣವನ್ನು ಸ್ವೀಕರಿಸಿ ಅದನ್ನು ನಿಮ್ಮ ಸಹಕಾರಿಯ ಹೆಸರಿನ ಅಮಾನತ್ ಖಾತೆಗೆ ಜಮಾ ಮಾಡುತ್ತಾರೆ. ಶೇರು ಸಂಗ್ರಹಣೆಗೆ ಅಗತ್ಯವಾದ ಮಾದರಿ ಶೇರು ಅರ್ಜಿ ಹಾಗೂ ಶೇರು ಹಣಕ್ಕೆ ನೀಡುವ ರಸೀದಿಯ ಮಾದರಿಯನ್ನು ಅನುಬಂಧ 5 ಹಾಗೂ 6 ರಲ್ಲಿ ನೀಡಲಾಗಿದೆ.

**ಇ. ನೋಂದಣಿ :**

ಶೇರು ಹಣ ಸಂಗ್ರಹಣೆ ಮುಗಿದ ನಂತರ ಸಹಕಾರಿಯ ನೋಂದಣಿಗೆ ಶೇರು ಸಂಗ್ರಹಣೆಗೆ ಅನುಮತಿ ನೀಡಿದ ನಿಬಂಧಕರಿಗೆ ಈ ಕೆಳಗಿನ ದಾಖಲೆಗಳೊಂದಿಗೆ ಅನುಬಂಧ-7ರಲ್ಲಿನ ಅರ್ಜಿ ಸಲ್ಲಿಸಬೇಕು.

1. ಶೇರು ಹಣವನ್ನು ಬ್ಯಾಂಕಿನಲ್ಲಿ ಜಮಾ ಮಾಡಿದ ಬಗ್ಗೆ ಪ್ರಮಾಣ ಪತ್ರ, ಕೌಂಟರ್ ಫಾಯಿಲ್, ಪಾಸ್ ಪುಸ್ತಕದ ನಕಲು ಪ್ರತಿ.
2. ಶೇರು ಹಣ ಪಾವತಿಸಿದ ಸದಸ್ಯರ ಪಟ್ಟಿ.
3. ಉದ್ದೇಶಿತ ಸಹಕಾರಿಯ ಪ್ರವರ್ತಕರ ಸಭೆ ಅಂಗೀಕರಿಸಿದ ಉಪವಿಧಿಯ ಐದು ಪ್ರತಿಗಳು. ಎಲ್ಲಾ ಪ್ರತಿಗಳ ಪ್ರತಿ ಪುಟಕ್ಕೆ ಮುಖ್ಯ ಪ್ರವರ್ತಕರ ಹಾಗೂ ಕೊನೆಯ ಪುಟಕ್ಕೆ ಎಲ್ಲಾ ಪ್ರವರ್ತಕರ ಸಹಿ ಇರಬೇಕು. ಉಪವಿಧಿಯನ್ನು ಪುಸ್ತಕದ ರೂಪದಲ್ಲಿ ಬೈಂಡ್ ಮಾಡಿಸುವುದು ಸೂಕ್ತ.
4. ಅಧಿಕತ ಶೇರು ಬಂಡವಾಳದ ಶೇ. 1 ರಷ್ಟು ನೋಂದಣಿ ಶುಲ್ಕ ಸಂದಾಯ ಮಾಡಿದ್ದರ ಬಗ್ಗೆ ಚಲನ್ನಿನ ಒಂದು ಪ್ರತಿ. (ಕನಿಷ್ಠ ರೂ. 500/- ; ಗರಿಷ್ಠ ರೂ. 5000/-) ನೋಂದಣಿಗೆ ಅರ್ಜಿ ಸಲ್ಲಿಸುವಾಗ ಚಲನ್ನಿಗೆ ಸಂಬಂಧಿಸಿದ ನಿಬಂಧಕರ ಸಹಿ ಪಡೆದು ನೋಂದಣಿ ಶುಲ್ಕವನ್ನು ಸರಕಾರಿ ಖಜಾನೆಯಲ್ಲಿ ತುಂಬಬೇಕು.

ನಿಬಂಧಕರು ನಿಮ್ಮ ಅರ್ಜಿಯನ್ನು ಪರಿಶೀಲಿಸಿ ನಿಮ್ಮ ಸಹಕಾರಿಯನ್ನು ನೋಂದಣಿ ಮಾಡುತ್ತಾರೆ. ನೋಂದಣಿ ಆದೇಶ ಜೊತೆಗೆ ನೋಂದಣಿ ಪ್ರಮಾಣ ಪತ್ರ, ನೋಂದಾಯಿತ ಉಪವಿಧಿಯ ಒಂದು ಪ್ರತಿಯನ್ನು ನೀಡುತ್ತಾರೆ.

**ಈ. ಕಾರ್ಯಾರಂಭ :**

ಸಹಕಾರಿಯ ನೋಂದಣಿಯಾದ ನಂತರ ಮುಖ್ಯ ಪ್ರವರ್ತಕರು ಪ್ರಥಮ ಸಾಮಾನ್ಯ ಸಭೆಯನ್ನು ಕರೆಯಬೇಕು. ಈ ಸಭೆಯಲ್ಲಿ ಪ್ರಥಮ ಆಡಳಿತ ಮಂಡಳಿಯ ಚುನಾವಣೆ ನಡೆಸಬೇಕು. ನಿಮ್ಮ ಸಹಕಾರಿಯ ನೋಂದಣಿಯಾದ ಕೂಡಲೇ ಪ್ರಥಮ ಆಡಳಿತ ಮಂಡಳಿಯ ಚುನಾವಣೆ ನಡೆಸಲು ಚುನಾವಣಾಧಿಕಾರಿಯನ್ನು ನಿಬಂಧಕರು ನೇಮಿಸುತ್ತಾರೆ. ನಿಬಂಧಕರು ನೇಮಿಸಿದ ಚುನಾವಣಾಧಿಕಾರಿಗಳು ಮುಖ್ಯ ಪ್ರವರ್ತಕರ ಜೊತೆಗೆ ಚರ್ಚಿಸಿ ಚುನಾವಣೆಯ ಪ್ರಕ್ರಿಯೆಯನ್ನು ನಡೆಸುತ್ತಾರೆ. ಪ್ರಥಮ ಆಡಳಿತ ಮಂಡಳಿಯ ಚುನಾವಣೆಯ ಹೊರತಾಗಿ ಸಾಮಾನ್ಯ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ನಿರ್ಣಯ ಕೈಗೊಳ್ಳಬೇಕು.

1. ಮಾನ್ಯ ಸಹಕಾರಿಗಳ ನಿಬಂಧಕರು ಮಾಡಿದ ಸಹಕಾರಿಯ ನೋಂದಣಿ ಮತ್ತು ನೋಂದಾಯಿತ ಉಪವಿಧಿಯನ್ನು ಒಪ್ಪಿಕೊಳ್ಳುವುದು.
2. ಸಾಮಾನ್ಯ ಸಭೆಯ ವರೆಗಿನ ಜಮಾ ಖರ್ಚುಗಳನ್ನು ಪರಿಶೀಲಿಸುವುದು ಮತ್ತು ಒಪ್ಪಿಕೊಳ್ಳುವುದು.
3. ಸದಸ್ಯತ್ವವನ್ನು ಕೋರಿ ಅರ್ಜಿ ಸಲ್ಲಿಸಿದವರಿಗೆ ಸದಸ್ಯತ್ವವನ್ನು ನೀಡುವುದು.
4. ಬ್ಯಾಂಕ್ ಖಾತೆ ತೆರೆಯುವ ಮತ್ತು ಚಲಾಯಿಸುವ ಕುರಿತು.
5. ಪ್ರಸಕ್ತ ವರ್ಷದ ಕಾರ್ಯ ಯೋಜನೆ.
6. ಪ್ರಸಕ್ತ ವರ್ಷದ ಅಂದಾಜು ಆಯವ್ಯಯ.
7. ಸಿಬ್ಬಂದಿ ವೃಂದ ಬಲಕ್ಕೆ ಅನುಮೋದನೆ ನೀಡುವುದು.
8. ಆಡಳಿತ ಮಂಡಳಿಯ ಆಯ್ಕೆ.
9. ಸಂಯುಕ್ತ ಸಹಕಾರಿ ಪ್ರಕಟಿಸಿದ ಪಟ್ಟಿಯಿಂದ ಸನ್ನದು ಲೆಕ್ಕ ಪರಿಶೋಧಕರ ನೇಮಕ.

• ಮೊದಲ ಆಡಳಿತ ಮಂಡಳಿ ಚುನಾವಣೆ ನಡೆದ ನಂತರ ಪದಾಧಿಕಾರಿಗಳ ಆಯ್ಕೆಗೆ ಮುಖ್ಯ ಪ್ರವರ್ತಕರು ಚುನಾಯಿತ ಮಂಡಳಿ ಸಭೆ ಕರೆಯಬೇಕು. ಈ ಸಭೆಯಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಬೇಕು. ಮುಖ್ಯ ಪ್ರವರ್ತಕರು ಈ ಸಭೆಯ ಅಧ್ಯಕ್ಷತೆ ವಹಿಸಬೇಕು. ಮುಖ್ಯ ಪ್ರವರ್ತಕರು ನಿರ್ದೇಶಕರಾಗಿ ಆಯ್ಕೆಯಾಗಿ, ಅವರೂ ಸಹ ಪದಾಧಿಕಾರಿ ಚುನಾವಣೆಯಲ್ಲಿ ಉಮೇದುವಾರರಾಗಿದ್ದಲ್ಲಿ, ಉಮೇದುವಾರರಾಗದ ಇತರೆ ಯಾವುದೇ ನಿರ್ದೇಶಕರು ಅಂತಹ ಸಭೆಯ ಅಧ್ಯಕ್ಷತೆ ವಹಿಸಬೇಕು. ಸಹಕಾರಿಯ ಹೆಸರಿನಲ್ಲಿ ಬ್ಯಾಂಕ್ ಖಾತೆ ನಿರ್ವಹಿಸುವವರ ಹೆಸರನ್ನು ನಿರ್ಧರಿಸಿ ನಿರ್ಣಯ ಕೈಗೊಳ್ಳಬೇಕು. ಈ ನಿರ್ಣಯದೊಂದಿಗೆ ನಿಬಂಧಕರಿಗೆ ಪತ್ರ ಬರೆದು ಅಮಾನತ್ ಖಾತೆಯಲ್ಲಿರುವ ಆರಂಭಿಕ ಶೇರು ಹಣವನ್ನು ಸಹಕಾರಿಯ ಹೆಸರಿನ





ಖಾತೆಗೆ ವರ್ಗಾಯಿಸಲು ಕೋರಬೇಕು. ನಿಮ್ಮ ಕೋರಿಕೆಯಂತೆ ನಿಬಂಧಕರು ಹಾಗೆ ಮಾಡುವಂತೆ ಬ್ಯಾಂಕಿಗೆ ನಿರ್ದೇಶಿಸುತ್ತಾರೆ.

**ಈಗ ನಿಮ್ಮ ಸಹಕಾರಿ ಸಂಪೂರ್ಣವಾಗಿ ಕಾರ್ಯಾರಂಭಿಸಲು ಸಿದ್ಧವಿದೆ.**

***ದಯವಿಟ್ಟು ಗಮನಿಸಿ :***

*ಅ. ಸಹಕಾರಿಗೆ ಹೆಸರು ಇಡುವಾಗ ಗಮನಿಸಬೇಕಾದ ಸಂಗತಿಗಳು*

- *ಹೆಸರಿನಲ್ಲಿ "ಸೌಹಾರ್ದ ಸಹಕಾರಿ' ಪದ ಕಡ್ಡಾಯವಾಗಿರತಕ್ಕದ್ದು.*
- *ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಸ್ಪಷ್ಟವಾಗಿ ತಿಳಿಸುವಂತಿರಬೇಕು.*
- *"ಸಂಘ" ಎಂಬ ಪದ ಬಳಸಬಾರದು.*
- *ಈಗಾಗಲೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರಲ್ಲಿ ಅಥವಾ ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ, 1997 ರಡಿ ನೋಂದಾಯಿತವಾದ ಸಂಸ್ಥೆಗಳು ಬಳಸಿದ ಹೆಸರು ಬಳಸುವಂತಿಲ್ಲ.*

*ಆ. ಮಾದರಿ ಉಪವಿಧಿಗಳಿಗಾಗಿ ಸಂಯುಕ್ತ ಸಹಕಾರಿಯ ಕಛೇರಿಯನ್ನು ಸಂಪರ್ಕಿಸಿ.*

*ಇ. ನೋಂದಣಿ ವೇಳೆಗೆ ಏನೇ ಮಾಹಿತಿ ಬೇಕಾಗಿದ್ದರೆ, ಏನೇ ತೊಂದರೆ ಎದುರಿಸಿದರೆ ಸಂಯುಕ್ತ ಸಹಕಾರಿ ನಿಮಗೆ ಸಹಾಯ ಮಾಡಲು ಯತ್ನಿಸುತ್ತದೆ.*

*ಈ. ನೋಂದಣಿ ಆದೇಶ ಪಡೆದ ಕೂಡಲೇ ನೋಂದಣಿ ವೇಳೆಗೆ ಏನೇ ಮಾಹಿತಿ ಬೇಕಾಗಿದ್ದರೆ, ಏನೇ ತೊಂದರೆ ಎದುರಿಸಿದರೆ ಸಂಯುಕ್ತ ಸಹಕಾರಿಗೆ ಪತ್ರ ಬರೆಯಿರಿ.*

**ಸೌಹಾರ್ದ ಸಹಕಾರಿ ಪರಿವಾರಕ್ಕೆ ನಿಮಗೆ ಹಾರ್ದಿಕ ಸ್ವಾಗತ**

## ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಡಿಯ ಸಹಕಾರ ಸಂಘಗಳು/ಬ್ಯಾಂಕುಗಳು

# ಸೌಹಾರ್ದ ಸಹಕಾರಿಗಳಾಗುವುದು ಹೇಗೆ?

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರಡಿ ಕೆಲಸ ನಿರ್ವಹಿಸುತ್ತಿರುವ ಈ ಕೆಳಗಿನ ಅರ್ಹತೆ ಹೊಂದಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಹೊರತಾಗಿ ಎಲ್ಲ ರೀತಿಯ ಸಹಕಾರ ಸಂಘಗಳು / ಬ್ಯಾಂಕುಗಳು ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ, 1997ಕ್ಕೆ ಪರಿವರ್ತಿತಗೊಳ್ಳಬಹುದು.

ಅ. ಪರಿವರ್ತನೆಯಾಗ ಬಯಸುವ ಸಹಕಾರ ಸಂಘ / ಬ್ಯಾಂಕು ಶೇರು, ಗ್ಯಾರಂಟಿ, ಸಾಲ ಇತ್ಯಾದಿ ಯಾವುದೇ ರೂಪದಲ್ಲಿ ಸರಕಾರದ ಸಹಾಯ ಪಡೆದಿರಬಾರದು.

ಆ. ಪರಿವರ್ತನೆಯ ಕಾಲಕ್ಕೆ ಡಿಸಿಸಿ ಬ್ಯಾಂಕ್ ಅಥವಾ ಅಪೆಕ್ಸ್ ಬ್ಯಾಂಕ್ ಸೇರಿದಂತೆ ಇತರೆ ಯಾವುದೇ ಸಹಕಾರಿ ಸಂಘ / ಬ್ಯಾಂಕಿನಿಂದ ಸಾಲ ಪಡೆದಿರಬಾರದು.

*ಗಮನಿಸಿ :*

*ಕ. ಬೇರೆ ಬೇರೆ ಯೋಜನೆಗಳಡಿ ಸರಕಾರದಿಂದ ಸಬ್ಸಿಡಿ ಪಡೆದಿದ್ದರೆ ತೊಂದರೆ ಇಲ್ಲ.*

*ಖ. ಡಿಸಿಸಿ ಬ್ಯಾಂಕು ಅಥವಾ ಅಪೆಕ್ಸ್ ಬ್ಯಾಂಕು ಅಥವಾ ಇತರೆ ಯಾವುದೇ ಸಹಕಾರಿ ಬ್ಯಾಂಕಿನಿಂದ ಸೌಹಾರ್ದ ಕಾಯ್ದೆಗೆ ಪರಿವರ್ತನೆಯಾದ ನಂತರ ಮತ್ತೆ ಹೊಸದಾಗಿ ಸಾಲ ಪಡೆಯಬಹುದು.*

**ಪರಿವರ್ತನೆಯ ಪ್ರಕ್ರಿಯೆ :**

ಸಹಕಾರಿ ಸಂಘ / ಬ್ಯಾಂಕು ತನ್ನ ಸಾಮಾನ್ಯ ಸಭೆ ಅಥವಾ ವಿಶೇಷ ಸಾಮಾನ್ಯ ಸಭೆಯಲ್ಲಿ ನಿರ್ಣಯ ಮಾಡುವುದರ ಮೂಲಕ ಸೌಹಾರ್ದ ಕಾಯ್ದೆಗೆ ಪರಿವರ್ತಿತಗೊಳ್ಳಬಹುದು.

**ಸಾಮಾನ್ಯ ಸಭೆಯ ನೋಟೀಸಿನಲ್ಲಿ ಈ ಕೆಳಗಿನ ವಿಷಯಗಳಿರಬೇಕು.**

1. ನಿಮ್ಮ ಸಹಕಾರ ಸಂಘ/ಬ್ಯಾಂಕನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ಕ್ಕೆ ಪರಿವರ್ತಿಸುವುದರ ಬಗ್ಗೆ.
2. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಡಿ ನೋಂದಾಯಿಸಲು ಉದ್ದೇಶಿಸಲಾದ ಸಂಖ್ಯೆ 1 ರಿಂದ.......ರ ವರೆಗಿನ ಉಪವಿಧಿಗಳನ್ನು ಒಪ್ಪಿಕೊಳ್ಳುವ ಬಗ್ಗೆ.





ಈ ವಿಷಯಗಳು ನಿಮ್ಮ ಸಾಮಾನ್ಯ ಸಭೆ ಅಥವಾ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ನಿಮ್ಮ ಪ್ರಸ್ತುತ ಇರುವ ಉಪವಿಧಿಯಂತೆ ಕನಿಷ್ಠ ಕೋರಂ ಇದ್ದು, ಇಂತಹ ನಿರ್ಣಯವು ಮೂರನೇ ಎರಡರಷ್ಟು ಸದಸ್ಯರ ಬಹುಮತದೊಂದಿಗೆ ಪಾಸಾದಲ್ಲಿ ನೀವು ಸೌಹಾರ್ದ ಸಹಕಾರಿಯಾಗಬಹುದು.

ಅಗತ್ಯ ಕಾಗದ ಪತ್ರಗಳಿಗೆ ಸಹಿ ಮಾಡಿ ನಿಮ್ಮ ಸಹಕಾರ ಸಂಘ/ಬ್ಯಾಂಕನ್ನು ಸೌಹಾರ್ದ ಕಾಯ್ದೆಯಡಿ ಪರಿವರ್ತನೆ ಮಾಡಲು ನಿಮ್ಮ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಅಧಿಕಾರ ನೀಡಿ, ನಿಗದಿತ ಅರ್ಜಿಯನ್ನು (ಅನುಬಂಧ-7) ನಿಮ್ಮ ಕಾರ್ಯಾಚರಣೆಯ ಪ್ರದೇಶಕ್ಕೆ ಸಂಬಂಧಿಸಿದ ಸಹಕಾರಿಗಳ ನಿಬಂಧಕರಿಗೆ ಸಲ್ಲಿಸಬೇಕು.

**ಸೌಹಾರ್ದ ಸಹಕಾರಿಯಾಗಲು ಅರ್ಜಿ ಸಲ್ಲಿಸುವ ಬಗ್ಗೆ :**

ಅನುಬಂಧ 7 ರಲ್ಲಿನ ಅರ್ಜಿಯನ್ನು ನಿಮ್ಮ ಸಹಕಾರಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಸಲ್ಲಿಸಬೇಕು. ಅದರೊಂದಿಗೆ ಸಲ್ಲಿಸಬೇಕಾದ ದಾಖಲೆಗಳು:-

ಅ. ಪರಿವರ್ತನೆಯ ವಿಷಯ ಚರ್ಚಿಸಲು ಕರೆದ ಸಾಮಾನ್ಯ ಸಭೆಯ ನೋಟೀಸು.

ಆ. ಸಾಮಾನ್ಯ ಸಭೆಯ ಹಾಜರಾತಿ ಪುಸ್ತಕ ಮತ್ತು ನಡವಳಿಕೆಗಳ ಧೃಢೀಕತ ನಕಲು.

ಇ. ಇತ್ತೀಚಿನ ವರ್ಷದ ಲೆಕ್ಕ ಪರಿಶೋಧನೆಯಾದ ಲಾಭ-ಹಾನಿ ಹಾಗೂ ಅಢಾವೆ ಪತ್ರಿಕೆ.

ಈ. ಸರಕಾರದಿಂದ ಹಾಗೂ ಯಾವುದೇ ಸಹಕಾರ ಸಂಘಗಳಿಂದ ಯಾವುದೇ ರೀತಿಯ ಶೇರು, ಸಾಲ ಹಾಗೂ ಗ್ಯಾರಂಟಿ ಪಡೆದಿಲ್ಲವೆನ್ನುವ ಲೆಕ್ಕ ಪರಿಶೋಧಕರ ಪ್ರಮಾಣ ಪತ್ರ ಮತ್ತು ಡಿಸಿಸಿ ಬ್ಯಾಂಕಿನಿಂದ ಬೇಬಾಕಿ ಪತ್ರ.

ಉ. ತಮ್ಮ ಸಹಕಾರ ಸಂಘ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರಡಿ ನೋಂದಣಿಯಾದ ಮೂಲ ನೋಂದಣಿ ಪತ್ರ ಹಾಗೂ ಕಾಲ ಕಾಲಕ್ಕೆ ತಿದ್ದುಪಡಿಯಾದ ಮೂಲ ಉಪವಿಧಿ.

ಊ. ಪ್ರಸ್ತುತ ಇರುವ ನಿರ್ದೇಶಕರುಗಳ ಹೆಸರು, ವಿಳಾಸ ವೃತ್ತಿ, ವಯಸ್ಸು ಹಾಗೂ ಅವರಿಂದ ಸಂಘಕ್ಕೆ ಬರಬೇಕಾದ ಸಾಲಗಳ ವಿವರಗಳಿರುವ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಹಿ ಮಾಡಿರುವ ಪಟ್ಟಿ.

ಋ. ಸಾಮಾನ್ಯ ಸಭೆ ಅನುಮೋದಿಸಿದ ಉಪವಿಧಿಯ 5 ಪ್ರತಿಗಳು, ಎಲ್ಲ ಐದು ಪ್ರತಿಗಳ ಪ್ರತಿ ಪುಟಕ್ಕೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕೊನೆಯ ಪುಟಕ್ಕೆ ಎಲ್ಲಾ ನಿರ್ದೇಶಕರೂ ಸಹಿ ಮಾಡಿರಬೇಕು.

ಇಷ್ಟು ದಾಖಲೆಗಳೊಂದಿಗೆ ನಿಮ್ಮ ಅಧಿಕತ ಶೇರು ಬಂಡವಾಳದ ಶೇ. 1 ರಷ್ಟು, (ಕನಿಷ್ಟ ರೂ. 500/– ಹಾಗೂ ಗರಿಷ್ಟ ರೂ. 5000/–) ನೋಂದಣಿ ಶುಲ್ಕವನ್ನು ಸರಕಾರಿ ಖಜಾನೆಗೆ ತುಂಬಿ, ಚಲನ್ನಿನ ಪ್ರತಿಯನ್ನು ನಿಮ್ಮ ಸಹಕಾರಿಗೆ ಸಂಬಂಧಿಸಿದ ನಿಬಂಧಕರಿಗೆ ಸಲ್ಲಿಸಬೇಕು. ನಿಬಂಧಕರು ನಿಮ್ಮ ಅರ್ಜಿಯನ್ನು ಪರಿಶೀಲಿಸಿ, ಅಗತ್ಯವಿರುವ ಇತರೆ ಮಾಹಿತಿಯನ್ನು ನಿಮ್ಮಿಂದ ಪಡೆದು, ಗರಿಷ್ಠ 90 ದಿನದಲ್ಲಿ ನಿಮ್ಮ ಸಹಕಾರಿ ಸಂಘವನ್ನು ಸೌಹಾರ್ದ ಕಾಯ್ದೆಯಡಿ ಪರಿವರ್ತಿಸಿ ನೊಂದಣಿ ಮಾಡಿ ಕೊಡುತ್ತಾರೆ.

**ಪರಿವರ್ತನೆಯ ನಂತರ :**

ನಿಮ್ಮ ಸಹಕಾರ ಸಂಘ ಸೌಹಾರ್ದ ಕಾಯ್ದೆಯಡಿ ಪರಿವರ್ತನೆಯಾದ 60 ದಿನಗಳಲ್ಲಿ ಹೊಸ ಮಂಡಳಿಯ ಚುನಾವಣೆ ನಡೆಸಬೇಕಾಗಿರುತ್ತದೆ. ಚುನಾವಣಾಧಿಕಾರಿಗಳನ್ನು ನಿಬಂಧಕರು ನೇಮಿಸುತ್ತಾರೆ.

ನಿಮ್ಮ ಸಹಕಾರ ಸಂಘವನ್ನು ಸೌಹಾರ್ದ ಕಾಯ್ದೆಯಡಿ ಪರಿವರ್ತನೆಯಾದ ಕೂಡಲೇ ಈ ಕೆಳಗಿನ ಮಾಹಿತಿಯೊಂದಿಗೆ ಸಂಯುಕ್ತ ಸಹಕಾರಿಯ ಕಛೇರಿಯನ್ನು ಸಂಪರ್ಕಿಸಿ ಹಾಗೂ ಹೆಚ್ಚಿನ ಮಾಹಿತಿ ಪಡೆಯಿರಿ.

1. ನೋಂದಣಿ ಆದೇಶ.
2. ಸಹಕಾರಿಯ ವಿಳಾಸ, ದೂರವಾಣಿ.
3. ಪ್ರಸ್ತುತ ಆಡಳಿತ ಮಂಡಳಿ ಸದಸ್ಯರ ಹೆಸರು, ವಿಳಾಸ, ಆಡಳಿತ ಮಂಡಳಿ ಚುನಾವಣೆ ನಡೆದ ದಿನಾಂಕ ಹಾಗೂ ಪದಾವಧಿ.
4. ಇತ್ತೀಚಿನ ಪರಿಶೋಧಿತ ಲೆಕ್ಕ ಪತ್ರ ವಿವರ.

*ಗಮನಿಸಿ :*

*ಅ. ಮಾದರಿ ಉಪವಿಧಿಗಳಿಗಾಗಿ ಸಂಯುಕ್ತ ಸಹಕಾರಿಯ ಕಛೇರಿಯನ್ನು ಸಂಪರ್ಕಿಸಿ*

**ಸೌಹಾರ್ದ ಸಹಕಾರಿ ಪರಿವಾರಕ್ಕೆ ನಿಮಗೆ**
**ಹಾರ್ದಿಕ ಸ್ವಾಗತ**





## ಅನುಬಂಧ–1

### ಉದ್ದೇಶಿತ ....................................ಸೌಹಾರ್ದ ಸಹಕಾರಿ ನಿ.

*ಆತ್ಮೀಯರೆ,*

ನಮ್ಮೆಲ್ಲರ ................................................ ಅವಶ್ಯಕತೆಗಳ ಪೂರೈಕೆಗಾಗಿ ನಗರದಲ್ಲಿ ಒಂದು ಸಹಕಾರಿಯನ್ನು ಪ್ರಾರಂಭಿಸುವ ಕುರಿತು ದಿನಾಂಕ..............................ರಂದು ನಗರದ ............................ದಲ್ಲಿ ಸಭೆಯನ್ನು ಕರೆಯಲಾಗಿದೆ.

*ಸಭೆಯಲ್ಲಿ ಚರ್ಚಿತವಾಗುವ ವಿಷಯಗಳು*

1. ಸಭೆಯ ಅಧ್ಯಕ್ಷರ ಆಯ್ಕೆ.
2. ಹೊಸ ಸಹಕಾರಿಯ ಸ್ಥಾಪನೆಯ ಅಗತ್ಯ.
3. ಅದರ ಉದ್ದೇಶ, ಕಾರ್ಯವ್ಯಾಪ್ತಿ ಹಾಗೂ ಅಧಿಕೃತ ಬಂಡವಾಳ.
4. ಉದ್ದೇಶಿತ ಉಪವಿಧಿಗಳನ್ನು ಒಪ್ಪಿಕೊಳ್ಳುವ ಬಗ್ಗೆ.
5. ಪ್ರವರ್ತಕರ ಮತ್ತು ಮುಖ್ಯ ಪ್ರವರ್ತಕರ ಆಯ್ಕೆ.

ಕಾರಣ ತಾವುಗಳು ಈ ಸಭೆಗೆ ತಮ್ಮ ಸ್ನೇಹಿತರ ಜೊತೆ ಆಗಮಿಸಿ ಹೊಸ ಸಹಕಾರಿಯ ಸ್ಥಾಪನೆಗೆ ಸಹಕರಿಸಬೇಕಾಗಿ ವಿನಂತಿ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ.

(............................................)

## ಅನುಬಂಧ–2

### ಉದ್ದೇಶಿತ ....................................ಸೌಹಾರ್ದ ಸಹಕಾರಿ ನಿ.

### ಪ್ರವರ್ತಕರ ಸಭೆಯ ನಡವಳಿಕೆಗಳು

ದಿನಾಂಕ :

ಸ್ಥಳ :

ಸಭೆಗೆ ಎಲ್ಲರನ್ನು ಸ್ವಾಗತಿಸಿದ ಶ್ರೀ/ಶ್ರೀಮತಿ .................................. ಇವರು ಶ್ರೀ/ಶ್ರೀಮತಿ........................................... ಇವರನ್ನು ಸಭೆಯ ಅಧ್ಯಕ್ಷತೆ ವಹಿಸುವಂತೆ ಕೋರಿದರು. ಹಾಜರಿದ್ದ ಪ್ರವರ್ತಕರೆಲ್ಲರೂ ಅನುಮೋದಿಸಿದ್ದರಿಂದ ಶ್ರೀ/ಶ್ರೀಮತಿ........................................... ಇವರು ಸಭೆಯ ಅಧ್ಯಕ್ಷತೆ ವಹಿಸಿದರು.

**ವಿಷಯ 1 : ಸೌಹಾರ್ದ ಸಹಕಾರಿ ಸಂಸ್ಥೆಯೊಂದನ್ನು ಪ್ರಾರಂಭಿಸುವ ಅಗತ್ಯದ ಬಗ್ಗೆ.**

ನಿರ್ಣಯ 1 : ಈ ಭಾಗದ ಜನರ ...................................................... ಸಮಸ್ಯೆ ನಿವಾರಣೆಗಾಗಿ ಒಂದು ಸಹಕಾರಿಯ ಅವಶ್ಯಕತೆ ಇರುವುದರಿಂದ ಸಹಕಾರಿಯೊಂದನ್ನು ಪ್ರಾರಂಭಿಸಲು ಸಭೆಯಲ್ಲಿ ಹಾಜರಿದ್ದ ಸರ್ವ ಸದಸ್ಯರುಗಳು ತಮ್ಮ ಅನುಮತಿಯನ್ನು ಸೂಚಿಸಿದರು.

**ವಿಷಯ 2 : ಸಹಕಾರಿಯ ಹೆಸರು, ಕಾರ್ಯವ್ಯಾಪ್ತಿ ಮತ್ತು ಅಧಿಕೃತ ಬಂಡವಾಳ.**

ನಿರ್ಣಯ 2 : ಉದ್ದೇಶಿತ ಸಹಕಾರಿಯ ಹೆಸರು ......................................... ಸೌಹಾರ್ದ ಸಹಕಾರಿ ನಿಯಮಿತ, ಎಂದು ಇರತಕ್ಕದ್ದು ಮತ್ತು ಇದರ ಕಾರ್ಯ ಕ್ಷೇತ್ರದ ವ್ಯಾಪ್ತಿಯು............... ಹೊಂದಿರಬೇಕೆಂದು ಸಭೆಯು ತೀರ್ಮಾನ ಕೈಗೊಂಡಿತು. ಅಲ್ಲದೇ ಸಹಕಾರಿಯ ಅಧಿಕೃತ ಬಂಡವಾಳ ರೂ.................. ಆಗಿರಬೇಕೆಂದೂ, ಇದನ್ನು ಪ್ರತಿ ಷೇರಿಗೆ ರೂ.................ರಂತೆ ಸಂಗ್ರಹಿಸ ಬೇಕೆಂದೂ ತೀರ್ಮಾನಿಸಲಾಯಿತು.

**ವಿಷಯ 3 : ಉದ್ದೇಶಿತ ಸಹಕಾರಿಯ ನೊಂದಣಿ ಕುರಿತು.**

ನಿರ್ಣಯ 3 : ಉದ್ದೇಶಿತ ಸಹಕಾರಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ರಡಿ ಹಾಗೂ ಅದರನ್ವಯ ರಚಿಸಲ್ಪಟ್ಟಿರುವ ನಿಯಮಗಳ ಪ್ರಕಾರ ನೋಂದಾಯಿಸಲು ತೀರ್ಮಾನಿಸಲಾಯಿತು.

**ವಿಷಯ 4 : ಉದ್ದೇಶಿತ ಸಹಕಾರಿಯ ಬೈಲಾಗಳನ್ನು ಒಪ್ಪಿಕೊಳ್ಳುವುದು.**





ನಿರ್ಣಯ 4 : ಪ್ರವರ್ತಕರಾದ ಶ್ರೀ ......................................... ಇವರು ಸಭೆಗೆ ಓದಿ ಹೇಳಿದ ಬೈಲಾ ಸಂಖ್ಯೆ 1 ರಿಂದ...........................ರವರೆಗಿನ ಬೈಲಾಗಳನ್ನು ಯಾವುದೇ ತಿದ್ದುಪಡಿ ಇಲ್ಲದೆ ಸಭೆ ಸರ್ವಾನುಮತದಿಂದ ಒಪ್ಪಿಕೊಂಡಿತು.

**ವಿಷಯ 5 : ಪ್ರವರ್ತಕರ ಆಯ್ಕೆ : ಮುಖ್ಯ ಪ್ರವರ್ತಕರ ಆಯ್ಕೆ**

ನಿರ್ಣಯ 5 : ಈ ಕೆಳಕಂಡ ಸದಸ್ಯರುಗಳನ್ನು ಸರ್ವಾನುಮತದಿಂದ ಸಹಕಾರಿಯ ಪ್ರವರ್ತಕರನ್ನಾಗಿ ಆಯ್ಕೆ ಮಾಡಲಾಯಿತು.

| | |
|---|---|
| 1. | 6. |
| 2. | 7. |
| 3. | 8. |
| 4. | 9. |
| 5. | 10. |

ಇವರಲ್ಲಿ ಶ್ರೀ ............................................................ ಇವರನ್ನು ಮುಖ್ಯ ಪ್ರವರ್ತಕರನ್ನಾಗಿ ಆಯ್ಕೆ ಮಾಡಲಾಯಿತು.

**ವಿಷಯ 6 : ನೋಂದಣಿಗೆ ಬೇಕಾಗಿರುವ ಸಿದ್ಧತೆ ಮತ್ತು ನೋಂದಣಿ ಮಾಡಿಸುವುದು.**

ನಿರ್ಣಯ 6 : ಮುಖ್ಯ ಪ್ರವರ್ತಕರಾದ ಶ್ರೀ ...................................................................... ಇವರಿಗೆ ನೋಂದಣಿಗೆ ಬೇಕಾಗಿರುವ ಸಿದ್ಧತೆ ಮತ್ತು ನೋಂದಣಿ ಕಾರ್ಯ ಕೈಗೊಳ್ಳಲು ಅಧಿಕಾರವನ್ನು ನೀಡಲು ಸಭೆ ನಿರ್ಧರಿಸಿತು. ಹಾಗೂ ಇದಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಕಾಗದ ಪತ್ರಗಳಿಗೆ ಸಹಿ ಮಾಡುವ ಅಧಿಕಾರ ನೀಡಲಾಯಿತು.

**ಮುಖ್ಯ ಪ್ರವರ್ತಕರ ಸಹಿ**

***ಪ್ರವರ್ತಕರ ಸಭೆಯಲ್ಲಿ ಹಾಜರಿದ್ದ ಸದಸ್ಯರು***

| ಕ್ರ. ಸಂ. | ಹೆಸರು | ಸಹಿ |
|---|---|---|
| 1 | | |
| 2 | | |
| 3 | | |
| . | | |
| . | | |

## ಅನುಬಂಧ–3

ಇವರಿಂದ

ಶ್ರೀಮತಿ / ಶ್ರೀ..............................................................

..................................................................................

ಮಾನ್ಯ ಸಹಕಾರಿಗಳ ...................................ನಿಬಂಧಕರು

...............................................................ಜಿಲ್ಲೆ / ಪ್ರಾಂತ

ಇವರಿಗೆ,

**ವಿಷಯ : ಷೇರು ಸಂಗ್ರಹಿಸಲು ಮುಖ್ಯ ಪ್ರವರ್ತಕರ ಆಯ್ಕೆಯನ್ನು ಅಧಿಕೃತಗೊಳಿಸುವುದರ ಬಗ್ಗೆ**

ಮಾನ್ಯರೆ,

ದಿನಾಂಕ ...............................ರಂದು ನಡೆದ ಉದ್ದೇಶಿತ ............................. ಸೌಹಾರ್ದ ಸಹಕಾರಿಯ ಪ್ರವರ್ತಕರ ಸಭೆ ನನ್ನನ್ನು ಮುಖ್ಯ ಪ್ರವರ್ತಕರನ್ನಾಗಿ ಆಯ್ಕೆ ಮಾಡಿದೆ. ಶೇರು ಹಣ ಸಂಗ್ರಹಣೆಗಾಗಿ ನನ್ನ ಆಯ್ಕೆಯನ್ನು ಅಧಿಕೃತಗೊಳಿಸಬೇಕೆಂದು ತಮ್ಮಲ್ಲಿ ಕೋರುತ್ತ ಈ ಕೆಳಗಿನ ದಾಖಲೆಗಳನ್ನು ತಮ್ಮ ಪರಿಶೀಲನೆಗಾಗಿ ಇದರೊಂದಿಗೆ ಲಗತ್ತಿಸಿರುವೆ.

1. ಪ್ರವರ್ತಕರ ಸಭೆಯ ನೋಟೀಸಿನ ಪ್ರತಿ.
2 ಪ್ರವರ್ತಕರ ಸಭೆಯ ನಡವಳಿಕೆಗಳ ಯಥಾ ನಕಲು.
3. ಪ್ರವರ್ತಕರ ಸಭೆ ಅನುಮೋದಿಸಿದ ಉಪವಿಧಿ.
4. ಪ್ರವರ್ತಕರ ವೈಯಕ್ತಿಕ ವಿವರಗಳು.

ಸ್ಥಳ : ವಂದನೆಗಳೊಂದಿಗೆ,
ದಿನಾಂಕ : ತಮ್ಮ ವಿಶ್ವಾಸಿ

(ಹೆಸರು)
ಮುಖ್ಯ ಪ್ರವರ್ತಕರು.





## ಅನುಬಂಧ–4

**ಪ್ರವರ್ತಕರ ವೈಯಕ್ತಿಕ ವಿವರ**

ಭಾವ ಚಿತ್ರ

ಹೆಸರು : ..................................................................................
..................................................................................

ತಂದೆ/ ಗಂಡ : ..................................................................................

ವಿಳಾಸ : ..................................................................................
..................................................................................
..................................................................................

ವೃತ್ತಿ : ..................................................................................

ವಯಸ್ಸು : ..................................................................................

ಈ ಮೇಲಿನ ವಿಷಯಗಳು ನನ್ನ ತಿಳುವಳಿಕೆ ಪ್ರಕಾರ ನಿಜವಿರುತ್ತವೆಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ :

ದಿನಾಂಕ : ಸಹಿ /–

## ಅನುಬಂಧ–5

### ಮಾದರಿ ಷೇರು ಅರ್ಜಿ

.......................................ಸೌಹಾರ್ದ ಸಹಕಾರಿ (ಉದ್ದೇಶಿತ)

ವಿಳಾಸ..................................................................................

ಭಾವ ಚಿತ್ರ

ಮುಖ್ಯ ಪ್ರವರ್ತಕರಿಗೆ,

ಮಾನ್ಯರೇ,

ಈ ಕೆಳಗೆ ಸಹಿ ಮಾಡಿದ ನಾನು.................................................................. ತಮ್ಮ ಉದ್ದೇಶಿತ ಸಹಕಾರಿ ಸಂಸ್ಥೆಯಲ್ಲಿ ಷೇರು ಪಡೆಯಲು ಈ ಅರ್ಜಿ ಸಲ್ಲಿಸಿದ್ದೇನೆ. ನನಗೆ ರೂ......................... ಮುಖಬೆಲೆಯ........................... ಷೇರುಗಳನ್ನು ಮಂಜೂರು ಮಾಡಲು ಕೋರುತ್ತೇನೆ.

**ವೈಯಕ್ತಿಕ ವಿವರ**

ಹೆಸರು : ..........................................................................................................

ತಂದೆ/ ಗಂಡ : ..........................................................................................................

ವಯಸ್ಸು : ..........................................................................................................

ವಿಳಾಸ : ..........................................................................................................

..........................................................................................................

ವೃತ್ತಿ : ............................................. ದೂರವಾಣಿ.........................................

ಈ ಮೇಲೆ ಹೇಳಿದ ವಿವರಗಳು ನಿಜವಿರುತ್ತವೆಂದು ಹಾಗೂ ಉದ್ದೇಶಿತ ............................................ ಸೌಹಾರ್ದ ಸಹಕಾರಿ ಸಂಸ್ಥೆಯ ಉಪವಿಧಿಗಳಿಗೆ ಅನುಗುಣವಾಗಿ ನಡೆದುಕೊಳ್ಳುತ್ತೇನೆಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ :

ದಿನಾಂಕ : (ಸಹಿ)





## ಅನುಬಂಧ–6

### ಉದ್ದೇಶಿತ ...................................ಸೌಹಾರ್ದ ಸಹಕಾರಿ ನಿ.

### ರಶೀದಿ

ಸಂಖ್ಯೆ : ದಿನಾಂಕ :

ಶ್ರೀ / ಶ್ರೀಮತಿ ಇವರಿಂದ ರೂ...................................... ಗಳನ್ನು ನಗದು/ ಚೆಕ್ / ಡಿ.ಡಿ. ಮೂಲಕ ಈ ಕೆಳಗಿನ ಬಾಬ್ತುಗಳಲ್ಲಿ ಸ್ವೀಕರಿಸಿದೆ.

ಷೇರು ಹಣ : ...........................................

ಷೇರು ಶುಲ್ಕ : ...........................................

ಪ್ರವೇಶ ಶುಲ್ಕ : .........................................

ಚೆಕ್ / ಡಿಡಿ ಸಂಖ್ಯೆ : .........................................

**ಮುಖ್ಯ ಪ್ರವರ್ತಕರ ಸಹಿ**

## ಅನುಬಂಧ–7

### ಸಹಕಾರಿಗಳ ನೋಂದಣಿಗಾಗಿ ಅರ್ಜಿಯ ನಮೂನೆ

(ನಿಯಮ – 3 ನೋಡಿ)

ಸಹಕಾರಿಗಳ ರಿಜಿಸ್ಟ್ರಾರ್ /ಜಂಟಿ/ಉಪ/ಸಹಾಯಕ ರಿಜಿಸ್ಟ್ರಾರ್

............................................

ಮಾನ್ಯರೇ,

.................................. ಸೌಹಾರ್ದ ಸಹಕಾರಿ ನಿಯಮಿತ, ಇದರ ನೋಂದಣಿಗಾಗಿ ಸಂಬಂದಪಟ್ಟ ಅಡಕಗಳ ಸಹಿತ ಪ್ರಸ್ತಾವವನ್ನು ಸಲ್ಲಿಸುತ್ತಿದ್ದೇನೆ.

2. ಈ ಕೆಳಗೆ ನೀಡುವ ಮತ್ತು ಲಗತ್ತಿಸಿದ ಅಡಕಗಳಲ್ಲಿ ನೀಡಿರುವ ಮಾಹಿತಿಗಳು ಸರಿಯಾಗಿವೆ ಮತ್ತು ನಿಖರವಾಗಿವೆ ಎಂದು ಘೋಷಿಸುತ್ತೇನೆ.

(1) ಸಹಕಾರಿಯ ಹೆಸರು

(2) ನೋಂದಣಿಯಾಗಬೇಕಾದ ವಿಳಾಸ

(3) ಉದ್ದೇಶಿತ ಸಹಕಾರಿಯ ಕಾರ್ಯವ್ಯಾಪ್ತಿ

(4) ಸದಸ್ಯರ ಹೊಣೆಗಾರಿಕೆ ಪರಿಮಿತವೇ ಅಥವಾ ಅಪರಿಮಿತವೇ

(5) ಮುಖ್ಯ ಉದ್ದೇಶಗಳು

(6) ಸಹಕಾರಿಯ ನೋಂದಣಿಯ ಅವಶ್ಯಕತೆ

(7) ಪ್ರಕರಣ 4ರ ಪಾಲನೆ ಬಗ್ಗೆ ಪ್ರಮಾಣ ಪತ್ರ

(8) ಪ್ರಕರಣ 5(2) ಮತ್ತು 5(3)ರ ಪಾಲನೆ ಬಗ್ಗೆ ಪ್ರಮಾಣ ಪತ್ರ

(9) ಮುಂದಿನ ಪತ್ರ ವ್ಯವಹಾರಕ್ಕಾಗಿ ಮುಖ್ಯ ಪ್ರವರ್ತಕರ : ಅರ್ಜಿದಾರರ ಹೆಸರು ಮತ್ತು ವಿಳಾಸ

(10) ಅಧಿನಿಯಮದ ಪ್ರಕರಣ 10(2)ರ ಖಂಡ (1)ರಿಂದ (24), 11(1), 12ರಿಂದ 17, 20ರಿಂದ 24, 26(1), 27, 28, 30ರಿಂದ 34 ಮತ್ತು





47ನೇ ಪ್ರಕರಣಗಳಿಗೆ ಹಾಗೂ 4, 10, 11 ಮತ್ತು 31ನೇ ನಿಯಮಗಳಿಗೆ ಅನುಗುಣವಾಗಿ ಉಪವಿಧಿಗಳಲ್ಲಿ ಉಪಬಂಧಗಳನ್ನು ಕಲ್ಪಿಸಲಾಗಿದೆಯೇ? ಹೌದಾದಲ್ಲಿ ವಿವರಗಳನ್ನು ಒದಗಿಸುವುದು.

(11) ಉದ್ದೇಶಿತ ಸಹಕಾರಿಯ ಹೆಸರಿನಲ್ಲಿ ಪಾವತಿಸಿರುವ ಮೊಬಲಗನ್ನು ತೋರಿಸುವ ಬ್ಯಾಂಕಿನ ದೃಢೀಕರಣ ಪತ್ರವನ್ನು ಲಗತ್ತಿಸುವುದು.

(12) ಉದ್ದೇಶಿತ ಸಹಕಾರಿಯನ್ನು ಆರ್ಥಿಕ ಸದೃಢತೆ ಮತ್ತು ತಾಂತ್ರಿಕ ಸಾಧ್ಯತೆಗಳಿಂದ ನಡೆಸುವ ಬಗ್ಗೆ ಪರಿಣಿತರು ತಯಾರಿಸಿದ ಪ್ರಾಜೆಕ್ಟ್ ವರದಿಯನ್ನು ಲಗತ್ತಿಸುವುದು.

(13) ಷೇರು ಹಣ ನೀಡಿರುವವರ ಹೆಸರು; ವಿಳಾಸ, ಷೇರು ಹಣ ಮತ್ತು ಸಹಿಗಳು ಇರುವ ಪಟ್ಟಿಯನ್ನು ಲಗತ್ತಿಸುವುದು.

ದಿನಾಂಕ :

ತಮ್ಮ ವಿಶ್ವಾಸಿ

ಅರ್ಜಿದಾರನ ಸಹಿ

## ಅನುಬಂಧ–8

**ಕರ್ನಾಟಕ ಸರ್ಕಾರ**
**ಸಹಕಾರ ಇಲಾಖೆ**

**ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ,**
ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 560 052

ಸಂ.ಆರ್‌ಎಸ್‌ಆರ್/ಸೌಕಾ/98/ಎಕ್ಸ್‌ಎಂಸಿ/2004–05 ದಿನಾಂಕ: 24–03–2005

ಸುತ್ತೋಲೆ ಸಂಖ್ಯೆ : 194

**ವಿಷಯ: ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿಯಲ್ಲಿ ಸಹಕಾರಿಗಳನ್ನು ನೋಂದಾಯಿಸುವ ಬಗ್ಗೆ ಮಾರ್ಗ ಸೂಚಿಗಳು**

**ಉಲ್ಲೇಖ:**

1. ಈ ಕಛೇರಿಯ ಪತ್ರ ಸಂ.ಆರ್.ಎಸ್‌ಆರ್/ಸೌಕಾ/5/2001–02 ದಿನಾಂಕ : 15.04.2002
2. ಈ ಕಛೇರಿ ಪತ್ರ ಸಂ.ಆರ್‌ಎಸ್‌ಆರ್/ಸೌಕಾ/5/2001–02 ದಿನಾಂಕ : 28.06.2002
3. ಈ ಕಛೇರಿ ಪತ್ರ ಸಂ.ಆರ್‌ಎಸ್‌ಆರ್/ಸೌಕಾ/139/ಎಕ್ಸ್‌ಎಂಎ/2002–03 ದಿನಾಂಕ : 10.02.2003.
4. ಈ ಕಛೇರಿ ಪತ್ರ ಸಂ.ಆರ್‌ಎಸ್‌ಆರ್/ಎಸ್‌ಎ/246/ಎಕ್ಸ್‌ಎಂ.ಸಿ/2003–04 ದಿನಾಂಕ : 07.02.2004.
5. ಗೌ.ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ.21220/2003ರ ದಿನಾಂಕ 30.10.2003ರ ತೀರ್ಪು.
6. ಸರ್ಕಾರದ ಅಸೂಚನೆ ಸಂ.ಸಿ.ಎಂ.ಡಬ್ಲ್ಯೂ/116/ಸಿಎಲ್‌ಎಂ/2002 ದಿನಾಂಕ 31.03.2004.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಇವರ ಪತ್ರ ಸಂ.2/2004–05 ದಿನಾಂಕ : 19.7.2004.
8. ಸರ್ಕಾರದ ಅಸೂಚನೆ ನಂ.ಸಿಎಂಡಬ್ಲ್ಯೂ : 57:ಸಿಎಲ್‌ಎಂ:2004 ದಿನಾಂಕ : 07.12.2004





ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ರಾಜ್ಯದಲ್ಲಿ ದಿನಾಂಕ 01.01.2001ರಿಂದ ಜಾರಿಗೆ ಬಂದ ಹಿನ್ನೆಲೆಯಲ್ಲಿ ಸದರಿ ಕಾಯ್ದೆ ಕಲಂ 4ರಡಿ ಅಕಾರ ಹೊಂದಿದ ಸಕ್ಷಮ ಪ್ರಾಕಾರಿಗಳು ಸಹಕಾರಿಗಳನ್ನು ನೋಂದಣಿ ಮಾಡುವ ಕುರಿತು ಉಲ್ಲೇಖ (1)ರ ಪತ್ರದಲ್ಲಿ ಸಹಕಾರಿಗಳನ್ನು ನೋಂದಾಯಿಸಲು ಮತ್ತು ಕರ್ನಾಟಕ ಸಹಕಾರ ಸಂಘಗಳಕಾಯ್ದೆ 1959ರಡಿಯಲ್ಲಿ ನೋಂದಾಯಿತವಾದ ಸಹಕಾರ ಸಂಘಗಳನ್ನು ಸೌಹಾರ್ದ ಸಹಕಾರಿಯಾಗಿ ಪರಿವರ್ತಿಸಿ ನೋಂದಣಿ ಮಾಡುವ ಬಗ್ಗೆ ಸಂಕ್ಷಿಪ್ತ ಮಾರ್ಗಸೂಚಿಯನ್ನು ನೀಡಲಾಗಿತ್ತು.

ಈ ಮಾರ್ಗಸೂಚಿಗಳನ್ನು ಗೌ.ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 21220/2003ರಲ್ಲಿ ಪ್ರಶ್ನಿಸಿದ್ದು, ಸದರಿ ನ್ಯಾಯಾಲಯದ ಆದೇಶದ ಅನ್ವಯ ಮತ್ತು ಸೌಹಾರ್ದ ಕಾಯಿದೆಗೆ ತಿದ್ದುಪಡಿಯಾದ ನಂತರ ದಿನಾಂಕ 31.03.2004ರಲ್ಲಿ ಜಾರಿಗೆ ತಂದಿರುವ ಕಾರಣ ಉಲ್ಲೇಖ (7)ರ ಪತ್ರದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಹೊಸದಾಗಿ ಮಾರ್ಗಸೂಚಿಗಳನ್ನು ಹೊರಡಿಸಲು ಈ ಕಛೇರಿಯನ್ನು ಕೋರಿರುತ್ತದೆ. ಉಲ್ಲೇಖ (1) ಮತ್ತು (3)ರ ಪತ್ರಗಳನ್ನು ರದ್ದುಪಡಿಸುತ್ತಾ, ಉಲ್ಲೇಖ (8)ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ನಿಯಮಗಳು ರಚನೆಯಾಗಿದ್ದು, ಎಲ್ಲಾ ನೋಂದಣಿ ಪ್ರಾಧಿಕಾರಗಳು, ಏಕರೂಪದ ಪದ್ಧತಿಯನ್ನು ಅನುಸರಿಸಬೇಕಾಗುವುದು ಅವಶ್ಯಕವೆಂದು ಮನಗಂಡು ಕೆಳಕಂಡ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

**ಮಾರ್ಗಸೂಚಿಗಳು :**

1. ಉದ್ದೇಶಿತ ಸೌಹಾರ್ದ ಸಹಕಾರಿಯ ನೋಂದಣಿ ಪೂರ್ವದಲ್ಲಿ ಕನಿಷ್ಠ ಹತ್ತು (10) ಜನ ಪ್ರವರ್ತಕರು, ಪ್ರವರ್ತಕರ ಸಭೆಯಲ್ಲಿ ಆಯ್ಕೆಯಾಗಿರಬೇಕು. ಪ್ರವರ್ತಕರ ಭಾವಚಿತ್ರವಿರುವ ಪರಿಚಯ ಪತ್ರ ಲಗತ್ತಿಸಬೇಕು. ಸಹಕಾರಿಯ ಸ್ಥಾಪನೆಗೆ ಆರ್ಥಿಕ ಸಬಲತೆ : ಕಾರ್ಯಸಾಧ್ಯತೆ (Financial viability : feasibility) ಬಗ್ಗೆ ಯೋಜನಾ ವರದಿ ಮತ್ತು ತಾಂತ್ರಿಕ ವರದಿ (Project report & Technical report)ಗಳು ಇರಬೇಕು.

2. ಸಹಕಾರಿಯ ಉಪವಿಧಿಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆಯ ಕಲಂ 10ರಂತೆ ಮತ್ತು ಇತ್ತೀಚೆಗೆ ಕಾಯಿದೆ ತಿದ್ದುಪಡಿಯಾಗಿರುವ ಎಲ್ಲಾ ಅಂಶಗಳು ಸೇರ್ಪಡೆಯಾಗಿರಬೇಕು. ಇದಲ್ಲದೇ ಉಪವಿಧಿಯಲ್ಲಿ ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್, ನಬಾರ್ಡ್ ಮತ್ತು ಕೇಂದ್ರ: ರಾಜ್ಯ ಸರ್ಕಾರಗಳು ನೀಡಿರುವ ಸುತ್ತೋಲೆ, ನಿರ್ದೇಶನಗಳನ್ನು ಉಪವಿಧಿಯ ರಚನೆಯಲ್ಲಿ ಪಾಲಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು.

3. ಸಹಕಾರಿಯ ಹೆಸರಿನಲ್ಲಿ "ಸೌಹಾರ್ದ" ಎಂಬ ಪದ ಮತ್ತು ಪತ್ತಿನ ಸಹಕಾರಿಗಳಲ್ಲಿ ಪತ್ತಿನ "ಸೌಹಾರ್ದ ಸಹಕಾರಿ" ಎಂಬ ಅಂಶಗಳನ್ನು ಸೇರಿಸಿರಬೇಕು. ಉದ್ದೇಶಿತ ಸಹಕಾರಿಯ ಹೆಸರನ್ನು ಈಗಾಗಲೇ ನೋಂದಣಿ ಆಗಿರುವ ಸಹಕಾರ ಸಂಘ : ಸೌಹಾರ್ದ ಸಹಕಾರಿಗಳು ಬಳಸಿರಬಾರದು. ಆರ್ಥಿಕ ಸಬಲತೆ : ಕಾರ್ಯಸಾಧ್ಯತೆ, ಉದ್ದೇಶಿತ ಸೌಹಾರ್ದ ಸಹಕಾರಿಯ ನೋಂದಣಿ ಬಗ್ಗೆ ಮನವರಿಕೆಯಾದ ನಂತರ, ಕಾಯಿದೆ ಕಲಂ 2(ಡಿ) ರೀತ್ಯಾ ಆಯ್ಕೆಯಾಗಿರುವ ಮುಖ್ಯ ಪ್ರವರ್ತಕರಿಗೆ ಪ್ರಾರಂಭಿಕ ಷೇರು ಧನ ಸಂಗ್ರಹಣೆಗೆ ಮತ್ತು ಉದ್ದೇಶಿತ ಸೌಹಾರ್ದ ಸಹಕಾರಿಯ ನೋಂದಣಿಗೆ ಪ್ರಸ್ತಾವನೆ ಸಲ್ಲಿಸಲು ಅನುಮತಿ ನೀಡತಕ್ಕದು.

4. ಉದ್ದೇಶಿತ ಸೌಹಾರ್ದ ಸಹಕಾರಿಯ ಆರ್ಥಿಕ ಸಬಲತೆ ಮತ್ತು ಕಾರ್ಯಸಾಧ್ಯತೆಯನ್ನು ದೃಢಪಡಿಸಿಕೊಂಡ ನಂತರ ಪ್ರಾಧಿಕಾರ ನಿಬಂಧಕರು, ಪತ್ತಿನ ಕಾರ್ಯಉದ್ದೇಶವಿರುವ ಸಹಕಾರಿಗಳಿಗೆ ಕೆಳಗೆ ನಮೂದಿಸಿರುವ ಕನಿಷ್ಠ ಸದಸ್ಯರಿಂದ ಪ್ರಾರಂಭಿಕ ಷೇರು ಹಣ ಸಂಗ್ರಹಿಸಲು ಸೂಚಿಸತಕ್ಕದ್ದು.

| ಕ್ರಮ ಸಂಖ್ಯೆ | ಸಹಕಾರಿಯ ಕಾರ್ಯವ್ಯಾಪ್ತಿಯ ಜನಸಂಖ್ಯೆ | ಕನಿಷ್ಠ ಸದಸ್ಯರು | ಪ್ರಾರಂಭಿಕವಾಗಿ ಷೇರು ಧನ ಸಂಗ್ರಹಿಸಬೇಕಾದ ಮೊತ್ತ |
|---|---|---|---|
| 1 | 2 | 3 | 4 |
| 1 | 2 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ | 200 | ರೂ.2.00 ಲಕ್ಷ |
| 2 | 2 ಲಕ್ಷದ ಮೇಲ್ಪಟ್ಟು, 5 ಲಕ್ಷದವರೆಗೆ | 300 | ರೂ.3.00 ಲಕ್ಷ |
| 3 | 5 ಲಕ್ಷದ ಮೇಲ್ಪಟ್ಟು, 10 ಲಕ್ಷದವರೆಗೆ | 500 | ರೂ.5.00 ಲಕ್ಷ |
| 4 | 10 ಲಕ್ಷದ ಮೇಲ್ಪಟ್ಟು, 20 ಲಕ್ಷದವರೆಗೆ | 750 | ರೂ.8.00 ಲಕ್ಷ |
| 5 | 20 ಲಕ್ಷಕ್ಕೆ ಮೇಲ್ಪಟ್ಟು | 1000 | ರೂ.10.00 ಲಕ್ಷ |

ಪತ್ತೇತರ ಸೌಹಾರ್ದ ಸಹಕಾರಿಗಳ ನೋಂದಣಿ ಪ್ರಸ್ತಾವನೆಯಲ್ಲಿ ಲಗತ್ತಿಸಿರುವಂತೆ ಆರ್ಥಿಕ ಸಬಲತೆ ಮತ್ತು ಕಾರ್ಯಸಾಧ್ಯತಾ ಯೋಜನಾವರದಿಯನ್ನು ತಯಾರಿಸಬೇಕು, ಯೋಜನಾ ವರದಿಯಲ್ಲಿ ಪ್ರಾರಂಭಿಕ ಐದು (5) ವರ್ಷಗಳಲ್ಲಿ ಮೂಲ ಷೇರು ಧನ ಸಂಪನ್ಮೂಲ ಸಂಗ್ರಹಣೆಯ ಗುರಿಯಲ್ಲಿ ನಮೂದಿಸಿರುವ ಮೊತ್ತದಲ್ಲಿ ಮೊದಲನೇ ವರ್ಷಕ್ಕೆ ನೋಂದಾಯಿಸಲು ಗುರಿ ನಿಗದಿಪಡಿಸಿಕೊಂಡಿರುವ ಕನಿಷ್ಠ ಸದಸ್ಯರಿಂದ ಷೇರು ಧನ ಸಂಗ್ರಹಿಸಲು ಗುರಿ ನಿಗದಿಪಡಿಸತಕ್ಕದ್ದು.





5. ಕಲಂ 5(2) (ಡಿ) ಅನ್ವಯ ಉಪವಿಧಿಯಲ್ಲಿ ನಮೂದಿಸಿರುವ ಒಟ್ಟು ಅಧಿಕೃತ ಷೇರು ಬಂಡವಾಳದ ಮೊತ್ತಕ್ಕೆ ಶೇ.1 ನೋಂದಣಿ ಶುಲ್ಕವನ್ನು ಕನಿಷ್ಠ ರೂ.500/– ಗರಿಷ್ಠ ರೂ.5,000/–ಗಳನ್ನು ನಿಗದಿಪಡಿಸಿ, ನೋಂದಣಿ ಶುಲ್ಕವನ್ನು ಸರ್ಕಾರಕ್ಕೆ ಈ ಕೆಳಕಂಡ ಲೆಕ್ಕ ಶೀರ್ಷಿಕೆಗೆ ಪಾವತಿ ಮಾಡತಕ್ಕದ್ದು.

   0425–ಸಹಕಾರ–00–800–ಇತರೇ ಸ್ವೀಕೃತಿ–0–09

   ನೋಂದಣಿ ಶುಲ್ಕ (ಸೌಹಾರ್ದ)–0425–00–800–0–09

6. ಮಹಿಳೆಯರೇ ಸಂಘಟಿಸುವ ಸಹಕಾರಿಗಳು ಹಾಗೂ ಉಲ್ಲೇಖ (4)ರ ಪತ್ರದಲ್ಲಿ ತಿಳಿಸಿರುವ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರು, ಸಮೂಹ ಗುಂಪಿನ ಸದಸ್ಯರು ಪರಿಶಿಷ್ಠ ಜಾತಿ: ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರು ಸಂಘಟಿಸುವ ಪತ್ತಿನ ಸಹಕಾರಿಗಳಿಗೆ ಕ್ರಮ ಸಂಖ್ಯೆ 4ರಲ್ಲಿ ನಮೂದಿಸಿರುವ ಮೊತ್ತದಲ್ಲಿ ಶೇ.50ರಷ್ಟು ಪ್ರಾರಂಭಿಕ ಷೇರು ಹಣ ಸಂಗ್ರಹಿಸಲು ಗುರಿ ನಿಗದಿಪಡಿಸತಕ್ಕದ್ದು.

7. ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರಡಿ ನೋಂದಣಿಯಾದ ಸಹಕಾರ ಸಂಘವು ಸೌಹಾರ್ದ ಸಹಕಾರಿಯಾಗಿ ಪರಿವರ್ತನೆ ಹೊಂದಲು ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಅವಕಾಶವಿದ್ದು, ಕಲಂ 5ರಡಿಯಲ್ಲಿ ತಿಳಿಸಿರುವ ಅವಶ್ಯಕ ದಾಖಲಾತಿಗಳನ್ನು ಪ್ರಸ್ತಾವನೆಯಲ್ಲಿ ಪಡೆದುಕೊಂಡ ನಂತರ, ಪರಿವರ್ತನಾ ನೋಂದಣಿಗೆ ಕ್ರಮವಿಡತಕ್ಕದು. ಅಗತ್ಯವಿದ್ದಲ್ಲಿ ಮೂಲ ದಾಖಲೆ ಪತ್ರಗಳನ್ನು ಪರಿಶೀಲಿಸಿ, ದೃಢಪಡಿಸಿಕೊಂಡ ನಂತರ, ನೋಂದಣಿ ಮಾಡಬಹುದು. ಆದರೆ, ಪರಿವರ್ತನಾ ಪೂರ್ವದಲ್ಲಿ ಸಹಕಾರ ಸಂಘಕ್ಕೆ ಸದರಿ ಕಾಯಿದೆಯ ಕಲಂ 28(ಎ)(5), 30(1) ಮತ್ತು 51ರಂತೆ ಆಡಳಿತಾಕಾರಿ : ವಿಶೇಷಾಕಾರಿ ನೇಮಕವಾಗಿರಬಾರದು.

8. ಸೌಹಾರ್ದ ಸಹಕಾರಿ ಕಾಯ್ದೆ ಅಡಿ ನೋಂದಣಿಯಾಗಿರುವ ಸಹಕಾರಿಯು, ಒಂದು ಸಹಕಾರ ಸಂಘವಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರಡಿ ಪರಿವರ್ತನೆ ಹೊಂದಲು ಅವಕಾಶವಿದ್ದು, ಇದಕ್ಕಾಗಿ ಸೌಹಾರ್ದ ಸಹಕಾರಿಯು ತನ್ನ ಸಾಮಾನ್ಯ ಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು, ಕಾರ್ಯವ್ಯಾಪ್ತಿಯ ನಿಬಂಧಕರಿಗೆ ಪ್ರಸ್ತಾವನೆ ಸಲ್ಲಿಸಬಹುದು. ಆದರೆ ಸೌಹಾರ್ದ ಸಹಕಾರಿಯು ಕಲಂ 14ರಂತೆ ಪಾಲುದಾರಿಕೆ ಸಹಕಾರಿ, (Partnership Cooperative) ಯನ್ನಾಗಲಿ, ಕಲಂ 15ರಂತೆ ಸಬ್ಸಿಡಿಯರೀ ಸಂಸ್ಥೆ (Subsidiary organisation)ಯನ್ನಾಗಲಿ, ಮತ್ತು ಕಲಂ 16ರಂತೆ ಸಹಯೋಗ ಸಹಕಾರಿ (Collaboration Cooperative)ಯನ್ನಾಗಲಿ, ಸ್ಥಾಪನೆ: ಸಂಘಟನೆ ಮಾಡಿರಬಾರದು. ಇದಲ್ಲದೇ ಕಲಂ 35ರಂತೆ ವಿಚಾರಣೆ ಇರಬಾರದು, ಮತ್ತು ಕಲಂ 26(2) ಮತ್ತು 38ರಡಿ ಆಡಳಿತಾಕಾರಿ ನೇಮಕವಾಗಿರಬಾರದು.

9. ಸಹಕಾರಿಯ ಕಾರ್ಯವ್ಯಾಪ್ತಿಯನ್ನು ನಿರ್ಧರಿಸುವಾಗ ಯಾವುದೇ ಬಗೆಯ ಆಡಳಿತಾತ್ಮಕ ವಿವಾದಗಳು ಬಾರದಂತೆ ಭೌಗೋಳಿಕ ಪ್ರದೇಶಗಳನ್ನು ಸ್ಪಷ್ಟವಾಗಿ ನಮೂದಿಸಿರಬೇಕು. ಭಾಗಶಃ ಪ್ರದೇಶ ಎಂಬ ಅರ್ಥವಿರಬಾರದು.

10. ಸಹಕಾರಿ ನೋಂದಣಿಯಾದ ನಂತರ ಎಲ್ಲಾ ಆದೇಶ ಪ್ರತಿಗಳನ್ನು ಉಪವಿಧಿಗಳೊಂದಿಗೆ ಸಹಕಾರಿಗಳ ನಿಬಂಧಕರಿಗೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ನಂ.132, 1ನೇ ಮಹಡಿ, ಕೆ.ಹೆಚ್.ರಸ್ತೆ, ಬೆಂಗಳೂರು – 560 027 ಈ ಸಂಸ್ಥೆಗೆ ಸಹಕಾರಿಯ ಉಪವಿಧಿಯೊಂದಿಗೆ ಕಳುಹಿಸತಕ್ಕದ್ದು. ಸೌಹಾರ್ದ ಸಹಕಾರಿ ಬ್ಯಾಂಕ್ ಆಗಿದ್ದಲ್ಲಿ, ನೋಂದಣಿ ಆದೇಶದ ಪ್ರತಿ ಮತ್ತು ಉಪವಿಧಿಗಳೊಂದಿಗೆ ಪ್ರಧಾನ ವ್ಯವಸ್ಥಾಪಕರು, ಅರ್ಬನ್ ಬ್ಯಾಂಕ್ ವಿಭಾಗ, ಭಾರತೀಯ ರಿಸರ್ವ್ ಬ್ಯಾಂಕ್, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು.

11. ಒಂದು ಪ್ರಸ್ತಾವಿತ ಸೌಹಾರ್ದ ಸಹಕಾರಿ ಬ್ಯಾಂಕ್ ಅಥವಾ ಹಾಲಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರಡಿ ನೋಂದಣಿಯಾದ ಸಹಕಾರ ಬ್ಯಾಂಕ್‌ನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ ಪೂರ್ವಾನುಮತಿ ಇಲ್ಲದೇ ನೋಂದಣಿ ಮಾಡತಕ್ಕದ್ದಲ್ಲ ಹಾಗೂ ಸದಸ್ಯತ್ವ, ಕಾರ್ಯವ್ಯಾಪ್ತಿ, ಷೇರು ಹಣ ಸಂಗ್ರಹಣೆ ಇತ್ಯಾದಿ ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನಗಳನ್ನು ಪಾಲಿಸುವುದು.

12. ಸೌಹಾರ್ದ ಸಹಕಾರಿ ಕಾಯ್ದೆಯಡಿ ಹೊಸದಾಗಿ ಗೃಹ ನಿರ್ಮಾಣ ಸಹಕಾರಿ ಅಥವಾ ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘವನ್ನು ಸೌಹಾರ್ದ ಸಹಕಾರಿಯಾಗಿ ಪರಿವರ್ತಿಸಿ ನೋಂದಣಿ ಮಾಡತಕ್ಕದ್ದಲ್ಲ.

ಮುಂದಕ್ಕೆ ಕಾಲಕಾಲಕ್ಕೆ ಸರ್ಕಾರ, ನಿಬಂಧಕರು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನಗಳನ್ನು ಪಾಲಿಸುವುದು ಮತ್ತು ಮೇಲ್ಕಂಡ ಮಾರ್ಗಸೂಚಿಯು ಈ ಸುತ್ತೋಲೆ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

**ಸಹಿ**

**(ಕೆ.ಹೆಚ್.ಗೋಪಾಲಕೃಷ್ಣೇಗೌಡ)**
ಸಹಕಾರಿಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು





## ಅನುಬಂಧ–8

**ಕರ್ನಾಟಕ ಸರ್ಕಾರ**
**ಸಹಕಾರ ಇಲಾಖೆ**
**ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ,**
ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 560 052

ನಂ.ಆರ್‌ಎಸ್‌ಆರ್/ಸೌಕಾ/46/ಎಕ್ಸ್‌ಎಂ.ಸಿ/2005–06 ದಿನಾಂಕ:15.06.2005

ಗೆ,

(1) ಎಲ್ಲಾ ಪ್ರಾಂತಗಳ ಸಹಕಾರಿಗಳ ಸಂಯುಕ್ತ ನಿಬಂಧಕರು
(2) ಎಲ್ಲಾ ಜಿಲ್ಲೆಗಳ ಸಹಕಾರಿಗಳ ಉಪ ನಿಬಂಧಕರು
(3) ಎಲ್ಲಾ ಉಪ–ವಿಭಾಗಗಳ ಸಹಕಾರಿಗಳ ಸಹಾಯಕ ನಿಬಂಧಕರು

ಮಾನ್ಯರೇ,

ವಿಷಯ : **ಸೌಹಾರ್ದ ಸಹಕಾರಿ ಕಾಯ್ದೆ ಅಡಿಯ ಸಹಕಾರಿಗಳ ಅಮಾನತ್ ಖಾತೆಯ ಹಣವನ್ನು ಸಹಕಾರಿಯ ನೋಂದಣಿ ನಂತರ ಸಹಕಾರಿಯ ಖಾತೆಗೆ ವರ್ಗಾಯಿಸುವ ಕುರಿತು.**

ಉಲ್ಲೇಖ :**ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಇವರ ಪತ್ರ ಸಂಖ್ಯೆ 34/2005–06 ದಿನಾಂಕ 29.04.2005.**

ರಾಜ್ಯದ ಅನೇಕ ಕಡೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 1997ರಡಿ ನೋಂದಣಿಯಾಗುವ ಸಹಕಾರಿಗಳ ನೋಂದಣಿ ಪೂರ್ವದಲ್ಲಿ ಸಂಗ್ರಹಿಸಲಾಗುವ ಷೇರು ಹಣವನ್ನು ಯಾವುದಾದರೂ ಸಹಕಾರಿ ಬ್ಯಾಂಕಿನ ಅಮಾನತ್ ಖಾತೆಯಲ್ಲಿ ತೊಡಗಿಸಲಾಗುತ್ತಿದೆ. ಸಹಕಾರಿಯ ನೋಂದಣಿ ನಂತರ ಸಹಕಾರಿಯ ಖಾತೆಗೆ ವರ್ಗಾವಣೆ ಮಾಡಲು ಅನುಮತಿ ನೀಡುವಾಗ ಸಹಕಾರಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಂದ ರೂ.20,000.00ಗಳ ಭದ್ರತಾ ಠೇವಣಿ ಮಾಡಿಸಿಕೊಳ್ಳಲು ಒತ್ತಾಯಪಡಿಸುತ್ತಿರುವುದಾಗಿ ಉಲ್ಲೇಖಗಳೊಂದಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು, ಈ ಕಛೇರಿಯ ಗಮನಕ್ಕೆ ತಂದು, ಈ ಬಗ್ಗೆ ಅಧೀನ ಕಛೇರಿಗಳಿಗೆ ಸೂಕ್ತ ತಿಳುವಳಿಕೆ ನೀಡಲು ಕೋರಿರುತ್ತಾರೆ.

ಈ ಮೇಲಿನ ಹಿನ್ನೆಲೆಯಲ್ಲಿ ಸಹಕಾರಿಯ ನೋಂದಣಿ ನಂತರ ಸಹಕಾರಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಂದ ಭದ್ರತಾ ಠೇವಣಿ ಮಾಡಲು ಇಲಾಖಾಧಿಕಾರಿಗಳು ಆಗ್ರಹ ಮಾಡಬಾರದೆಂದು ತಿಳಿಸಲು ಮಾನ್ಯ ಸಹಕಾರಿಗಳ ನಿಬಂಧಕರಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ
ಸಹಿ/–
**(ಎನ್.ಎಂ.ಪಾಟೀಲ್)**ಸಹಕಾರಿಗಳ
ಸಂಯುಕ್ತ ನಿಬಂಧಕರು(ಕೇಂದ್ರಸ್ಥಾನ)